
# ಚೌಕಟ್ಟಿಲ್ಲದ ಕವನಗಳು

ಕುಮಾರ್ ಆರ್.ಎ.

Tara Prints
THE PRINT HOUSE

ವಾಣಿಜ್ಯಶಾಸ್ತ್ರದ ರೀಡರ್ ಆಗಿ ಕಾಲೇಜಿನ ಆಡಳಿತ ಅಧಿಕಾರಿಯಾಗಿ. ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತಿಹೊಂದಿ ಬಗೆಬಗೆಯ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಆರ್.ಎ. ಕುಮಾರ್ ಈಗ ಅರುವತ್ತೈದರ ಹೊಸ್ತಿಲು ಮೆಟ್ಟಿದ್ದಾರೆ. ಬರಹದ ಕುಸುರಿ. ನಾಜೂಕು. ಸರಸತೆ. ಗೇಯತೆಗಳಿಗಿಂತ ವಿಷಾದ ಲೇಪಿತ ನೇರ. ದಿಟ್ಟ. ರೂಕ್ಷ ನುಡಿಗಳಿಂದಲೇ ಸುತ್ತಲ ಆಗುಹೋಗುಗಳಿಗೆ ಸ್ಪಂದಿಸುವ ಕುಮಾರ್ ಅವರ ಈ ಕೃತಿ ವಿಭಿನ್ನವಾಗಿದೆಯೆನ್ನಬೇಕು.



ಪರಿಚಿತ ಚಿಂತನೆಗಳ ನಡುವೆ ಅಲ್ಲಲ್ಲಿ ಸ್ವೋಪಜ್ಞತೆ ಮಿಂಚಿಸುವ ಈ ಸಂಕಲನದಲ್ಲಿ ಕೆಲ ಹನಿಗಳಾದರೂ ಮನಸೆಳೆಯುವುದು ನಿಶ್ಚಿತ. ಸ್ವಾರ್ಥ. ವಂಚನೆ. ಚುನಾವಣೆ. ರಾಜಕೀಯ. ಅನ್ನದಾತನ ಅಳಲು. ಟೀವಿ ಲೋಕ. ಪ್ರೇಮಿಗಳ ದಿನ ಮುಂತಾದವುಗಳನ್ನು ಕುರಿತ ಸಾಲುಗಳಲ್ಲಿ ಸಮಾಜದ ಓರೆಕೋರೆಗಳಿಗೆ ಇಲ್ಲಿ ಕನ್ನಡಿ ಹಿಡಿಯಲಾಗಿದೆ. 'ಶುರುವಾಗಿದೆ ಮೌಢ್ಯಬಿತ್ತುವ ಸಮಯ' ಪೊಳ್ಳು ಜ್ಯೋತಿಷಿಗಳ ಜಾತಕ ಬಿಚ್ಚಿಟ್ಟರೆ 'ಸಮಯ-ಹೃದಯ' ಸೂಕ್ಷ್ಮ ವಿಚಾರವೊಂದನ್ನು ಮೆಲ್ಲಗೆ ಮನಮುಟ್ಟಿಸುತ್ತದೆ. ಹೆಣ್ಣಿನ ವಿಶೇಷತೆಯ ಅರಿವುಳ್ಳ ಕುಮಾರ್ ಅವಳ ನೋವಿಗೆ ಸ್ಪಂದಸಿರುವುದನ್ನೂ ಹಲವೆಡೆ ಕಾಣಬಹುದು. ಕಾವ್ಯದಂತೆ ಕಾಣುವ ಗೇಯ. ಪ್ರಾಸಯುಕ್ತ ಬರವಣಿಗೆಯ ಯತ್ನ ಅಪರೂಪವಾಗಿ ಕಂಡರೂ 'ಚೌಕಟ್ಟಿಲ್ಲದ ಕವನಗಳು' ಎಂಬ ಒಪ್ಪುವ ಶೀರ್ಷಿಕೆಯನ್ನೇ ತಮ್ಮ ಕೃತಿಗೆ ನೀಡಿರುವ ಕುಮಾರ್ 'ಕವಿತೆಯಲ್ಲಿ ಏನಿರಬೇಕು' ಎಂದೂ ತಮಗೆ ತಿಳಿದಿರುವುದನ್ನು ಅದೇ ತಲೆಬರಹದ ಕವಿತೆಯೊಂದರ ರೂಪದಲ್ಲೇ ತಿಳಿಸಿದ್ದಾರೆ. ಕವಿತಾರಚನೆಯಲ್ಲಿ ಆಸಕ್ತಿ ಮೊಳೆತ ಕೆಲವೇ ತಿಂಗಳುಗಳ ಅವಧಿಯಲ್ಲಿ ಇಷ್ಟೊಂದು ಬರೆದು ಪ್ರಕಟಿಸಲು ತೋರಿರುವ ಉತ್ಸಾಹವನ್ನು ನೋಡಿದರೆ ಕಾವ್ಯವು ಈಗಲೂ ಅಭಿವ್ಯಕ್ತಿಯ ಸಮರ್ಥ ಮಾಧ್ಯಮವಾಗಿ ಉಳಿದಿರುವುದು ಮನದಟ್ಟಾದೀತು. ಕೃತಿಯ ಕೊನೆಯ ಸಾಲು ಕೋರಿರುವಂತೆ 'ಇನ್ನು ಬಾಕಿಯಿದೆಯಷ್ಟೇ ಸಹೃದಯರ ಸ್ವೀಕೃತಿ'

– ಬಿ.ಎಸ್. ಚಂದ್ರಶೇಖರ್

ತ.ರಾ.ಸು ಪ್ರಶಸ್ತಿ. ಆರ್ಯಭಟ ಪ್ರಶಸ್ತಿ ಪುರಸ್ಕೃತರು


Tara Prints
THE PRINT HOUSE

# 285, 21, ರಾಮಾನುಜ ರಸ್ತೆ
ಫೋರ್ಟ್ ಮೊಹಲ್ಲಾ
ಮೈಸೂರು – 570 004

# ಚೌಕಟ್ಟಿಲ್ಲದ ಕವನಗಳು


ಲೇಖಕರು

**ಕುಮಾರ್. ಆರ್.ಎ**



ಪ್ರಕಾಶಕರು

**ಗಾಯತ್ರಿ ಪ್ರಿಂಟರ್ಸ್**

ನಂ. 483, ಎಂ.ಜಿ. ರಸ್ತೆ,

ಫೋರ್ಟ್ ಮೊಹಲ್ಲಾ, ಮೈಸೂರು – 4

# CHOWKATTILLADA KAVANAGALU

*Written by* :

**Kumar R.A.**

Published by :

**Gayathri Printers**

# 483, M.G. Road, Fort Mohalla, Mysore - 4

| | | |
|---|---|---|
| Pages | : | iv + xii+ 132 = 148 |
| First Edition | : | 2016 |
| © | : | Publishar |
| Copies | : | 1000 copies |
| Price | : | Rs. 120/- |
| ಪುಟಗಳು | : | iv + xii+ 132 = 148 |
| ಮೊದಲ ಮುದ್ರಣ | : | 2016 |
| © | : | ಪ್ರಕಾಶಕರದು |
| ಪ್ರತಿಗಳು | : | 1000 copies |
| ಬೆಲೆ | : | ರೂ. 120/- |
| ಮುಖಪುಟ ವಿನ್ಯಾಸ | : | ಹೇಮ ಜಿ.ವಿ |
| ಅಕ್ಷರ ಜೋಡಣೆ | : | ನಾಗಶ್ರೀ |
| ಮುದ್ರಣ | : | ಗಾಯತ್ರಿ ಪ್ರಿಂಟರ್ಸ್, ಮೈಸೂರು |

# ಅರಿಕೆ

ಕಳೆದ ತಿಂಗಳು ಮೊತ್ತಮೊದಲಬಾರಿಗೆ ಮೈಸೂರು ನಗರದಲ್ಲಿ 'ಸಾಹಿತ್ಯ ದಾಸೋಹ' ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನನ್ನ ಬಾಲ್ಯ ಗೆಳೆಯ ಕೃಷ್ಣ ನನ್ನನ್ನೂ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದನು. ಅದರಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿರುವ, ಮಾಡದಿರುವ ಹಲವರು ಭಾಗವಹಿಸಲಿರುವರೆಂದೂ, ನನ್ನನ್ನೂ ನನ್ನ ಯಾವುದಾದರೂ ಬರಹವಿದ್ದರೆ ಅಲ್ಲಿ ಓದಬಹುದೆಂದೂ ತಿಳಿಸಿದ. ನಿಗದಿಪಡಿಸಿದ ದಿನದಂದು ನಾನೂ ಅಲ್ಲಿಗೆ ಹೋಗಿ ನನ್ನ ಒಂದು ಗ್ರಾಮ್ಯ ಭಾಷೆಯಲ್ಲಿ ಬರೆದ ಕಥೆಯೊಂದನ್ನು ಓದಿದೆ. ಬಂದವರಲ್ಲಿ ಹೆಚ್ಚಿನವರು ಓದಿದ್ದು ಅವರವರ ಕವನಗಳನ್ನು.

ಈ ಸಾಹಿತ್ಯ ದಾಸೋಹ ನನ್ನನ್ನೂ ಕವನ ಬರೆಯಲು ಪ್ರೇರೇಪಿಸಿತು. ಆ ದಿನಗಳಲ್ಲಿ ಹುಚ್ಚ ವೆಂಕಟ್ 'ಬಿಗ್ ಬಾಸ್' ಮನೆಯಿಂದ ಹೊರಬಿದ್ದ ಹೊಸತು. ಹೊರಬಂದು ವಾರವಾದರೂ ಅವನನ್ನು ಯಾವುದಾದರೂ ಒಂದು ಚಾನಲ್ಲಿನವರು ಕುಳ್ಳಿರಿಸಿಕೊಂಡು ಸಂದರ್ಶನ ಮಾಡುತ್ತಲೇಹೋದರು. ಈ ಘಟನೆಗಳಿಂದ ಪ್ರೇರೇಪಿತನಾದ ನಾನು ಕೆಲವು ಹನಿಗವನಗಳನ್ನು ಗೀಚುತ್ತಾ ಹೋದೆ. ಹಾಗೇ ಇತರ ವಿಚಾರಗಳೂ ತಲೆಹೊಕ್ಕು ನನ್ನ ಕವನಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು.

ಇಗೋ ಈ ಮುಂದಿನ ಸಾಲುಗಳಲ್ಲಿವೆ ಆ ಕವನಗಳ ಮಾಲೆ. ಈ ಮಾಲೆಗೆ ಹೆಸರೇನಿಡಬಹುದೆಂಬ ಬಗೆಗೆ ಯೋಚಿಸಿದಾಗ ಇವುಗಳ ನಡುವೆ ಯಾವುದೇ ಕಟ್ಟುಪಾಡು ಇರುವುದು ಕಂಡುಬರಲಿಲ್ಲ. ನನ್ನ ಬರಹಗಳಿಗೆ ನಾನು ಕೊಟ್ಟ 'ಕಂಡಿದ್ದು ಕಾಡಿದ್ದು' ಮಾದರಿಯಲ್ಲೇ ಈ ಕವನಗಳಿಗೆ ಯಾವುದೇ ಚೌಕವಿಲ್ಲ, ಅಂಕೆಯಿಲ್ಲ. ಹಾಗಾಗಿ ಇವಕ್ಕೆ 'ಚೌಕಟ್ಟಿಲ್ಲದ ಕವನಗಳು' ಎಂಬ ಹೆಸರೇ ಸೂಕ್ತ ಎನ್ನಿಸಿತು.

ನನ್ನ ಈ ಕಿರುಪ್ರಯತ್ನಕ್ಕೆ ಚಂದದ ಮುನ್ನುಡಿ ಬರೆದುಕೊಟ್ಟ ಪ್ರೊ. ಹೆಚ್. ಎಸ್. ಮುದ್ದೇಗೌಡ ಮತ್ತು ಬೆನ್ನುಡಿ ಬರೆದುಕೊಟ್ಟ ಶ್ರೀ ಬಿ.ಎಸ್. ಚಂದ್ರಶೇಖರ್‌ರವರಿಗೆ ನನ್ನ ವಂದನೆಗಳು. ಇದನ್ನು ಅಂದವಾಗಿ ಮುದ್ರಿಸಿ, ಪ್ರಕಾಶಿಸಿದ ತಾರಾ ಪ್ರಿಂಟ್ಸ್ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ವಂದನೆಗಳು

**ಕುಮಾರ್.ಆರ್.ಎ**

# ಮುನ್ನುಡಿ

ಪ್ರೊ॥ ಆರ್.ಎ.ಕುಮಾರ್‌ರವರು ಮಂಡ್ಯದ ಪ್ರತಿಷ್ಠಿತ ಪಿ.ಇ.ಎಸ್.ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ, ಕಾಲೇಜು ಪ್ರಾಂಶುಪಾಲರಾಗಿ, ಯುಜಿಸಿ ನ್ಯಾಕ್ ಕಮಿಟಿ ಸದಸ್ಯರಾಗಿ ದುಡಿದವರು. ಯಶಸ್ವೀ ಅಧ್ಯಾಪಕರಾಗಿ, ವಿದ್ಯಾರ್ಥಿವಲಯದಲ್ಲಿ ಜನಪ್ರಿಯರು. ದಕ್ಷ ಆಡಳಿತಗಾರರಾಗಿ ಹೆಸರು ಮಾಡಿದವರು. ಬೃಹತ್ ಕಾಲೇಜಿನ ಪ್ರಾಂಶುಪಾಲರಾಗಿ, ಆಡಳಿತಾತ್ಮಕ ಕೋಲಾಹಲದ ನಡುವೆ ಕಳೆದುಹೋಗದೇ, ತಮ್ಮೊಳಗಿನ ಓದುಗನನ್ನು ನಿರಂತರ ಜಾಗತಿಕ ಸ್ಥಿತಿಯಲ್ಲಿ ಇರಿಸಿಕೊಂಡವರು. ಶ್ರೀಯುತರ ಸತತ ಅಭ್ಯಾಸ, ಸಾಹಿತ್ಯಪ್ರೇಮ, ಹಾಸ್ಯಮನೋಭಾವ ಅನನ್ಯ. ಎಂಥಹ ಕಠಿಣ ಸಮಸ್ಯೆ ಎದುರಾದರೂ ತಮ್ಮ ನಗೆಮಿಶ್ರಿತ ಮಾತಿನ ಮೋಡಿಯಿಂದ ಬಿಗುವಾದ ವಾತಾವರಣವನ್ನು ತಿಳಿಗೊಳಿಸಬಲ್ಲ ಚಾಣಾಕ್ಷರು, ಗುಣಗ್ರಾಹಿ, ಅಜಾತಶತ್ರು. ಇಂತಹವರ ಜೊತೆ ಅನೇಕ ವರ್ಷಗಳಕಾಲ ಸಹೋದ್ಯೋಗಿಯಾಗಿ ದುಡಿದ ಹಿರಿಮೆ ನನ್ನದು.

ತಮ್ಮ ಈ ಕವನ ಸಂಕಲನಕ್ಕೆ ಕಿರಿಯನಾದ ನನ್ನಿಂದಲೇ ಮುನ್ನುಡಿ ಬರೆಸಬೇಕೆಂಬ ಇವರ ಸ್ನೇಹದ ಔದಾರ್ಯಕ್ಕೆ ನಾನು ಆಭಾರಿ. ಈಗಾಗಲೇ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿರುವ ಪ್ರೊ॥ ಕುಮಾರ್‌ರವರ ಲಲಿತ ಪ್ರಬಂಧ, ಕವಿತೆ, ಕಥೆ ಮತ್ತು ಪ್ರವಾಸ ಸಾಹಿತ್ಯ ಮೊದಲಾದವುಗಳಲ್ಲಿ ತಾವೊಬ್ಬರು ಉತ್ತಮ ಲೇಖಕ ಎಂಬುದನ್ನು ಸಾಬೀತುಗೊಳಿಸಿದ್ದಾರೆ. ಈಗಾಗಲೇ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಬೆಳಕು ಕಂಡಿರುವ ಇವರ ಅನೇಕ ಬರಹಗಳು ಮೇಲಿನ ನನ್ನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಸಹೃದಯ ಓದುಗರಿಗೂ ಇದು ವೇದ್ಯವಾಗುವ ಸಂಗತಿ.

ಇವರ ಕವಿತೆಗಳನ್ನು ಸೂಕ್ಷ್ಮವಾಗಿ ಅಭ್ಯಾಸಮಾಡಿದಾಗ ಸಮಾಜದ ನಾನಾ ಸಂಗತಿಗಳ ಮೇಲೆ ಬೆಳಕು ಚೆಲ್ಲಿರುವ ಅನುಭವ ಪೂರ್ಣ ವಿಚಾರಗಳ ಉತ್ತಮ ಅಭಿವ್ಯಕ್ತಿ ಎನಿಸದಿರದು. ಜಗತ್ತಿನ ಓರೆಕೋರೆಗಳನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕನಮಾಡಿ, ಆ ವಸ್ತುವಿನ ಸರ್ವ ಆಯಾಮಗಳನ್ನು ಪದರಪದರವಾಗಿ ಬಿಡಿಸಿ ಹೇಳುತ್ತಾ, ಅದಕ್ಕೆ ತಮ್ಮದೇ ಆದ ಪರಿಹಾರ ಮಾರ್ಗವನ್ನೂ ಸೂಚಿಸುತ್ತಾರೆ.

ಇಲ್ಲಿನ ಬಹುಪಾಲು ಕವಿತೆಗಳು ವಾಚ್ಯ ಎನಿಸಿಬಿಡುತ್ತವೆ. ಯಾವುದೇ ವ್ಯಾಕರಣದ ನಿಯಮಗಳಿಗೆ ಕವಿ ಜೋತುಬಿದ್ದಿಲ್ಲ. ಅದೂ ಒಂದು ರೀತಿ ಒಳ್ಳೆಯದೇ! ಯಾವುದೇ ಕವಿ ತಾನು ಬರೆದ ವಿಚಾರ ಸಹೃದಯರಿಗೆ ತಲುಪಬೇಕೆಂದು ಬಯಸುವುದು ಸಹಜ. ಕವನದ ವಸ್ತುವಿನ ನಿರೂಪಣೆ ಸರಳವಾಗಿದ್ದು ಮೊದಲ ಓದಿಗೆ ಓದುಗನನ್ನು ತಲುಪಿದರೆ ಆಗ ಮಾತ್ರ ಆ ಕವಿತೆಯ ಸಾರ್ಥಕ್ಯ ಎಂದು ಭಾವಿಸಿದವನು ನಾನು. ಆಗ ಕವಿಗೂ ಧನ್ಯತೆಯ ಭಾವ ಮೂಡುತ್ತದೆ.

ಈ ಹಿನ್ನೆಲೆಯಲ್ಲಿ ಪ್ರೊ॥ ಕುಮಾರ್‌ರವರು ತಾವೊಬ್ಬ ಉತ್ತಮ ಕವಿಯಾಗುವ ಎಲ್ಲ ಲಕ್ಷಣಗಳನ್ನೂ ಈ ಸಂಕಲನದಲ್ಲಿ ಸಾಬೀತುಪಡಿಸಿದ್ದಾರೆ. ನಿವೃತ್ತಿ ನಂತರದ ಈ ವಯೋಮಾನದಲ್ಲಿ ಸಾಹಿತ್ಯದ ಬಗೆಗಿನ ಇವರ ಆಸಕ್ತಿ ಅಭಿನಂದನೀಯ. ಈ ನಿಟ್ಟಿನಲ್ಲಿ ಇವರ ಉತ್ಸಾಹ ಬತ್ತದಿರಲಿ. ಇನ್ನೂ ಅನೇಕ ಉತ್ತಮ ಕೃತಿಗಳು ಇವರ ಲೇಖನಿಯಿಂದ ಹೊರಬರಲಿ ಎಂದು ತುಂಬು ಪ್ರೀತಿಯಿಂದ ಹಾರೈಸುತ್ತೇನೆ.

**ಡಾ॥ ಎಚ್.ಎಸ್.ಮುದ್ದೇಗೌಡ,**

ವಿಶ್ರಾಂತ ಕನ್ನಡ ಪ್ರಾಧ್ಯಾಪಕ

ಪಿ.ಇ.ಎಸ್.ವಿಜ್ಞಾನ, ಕಲಾ & ವಾಣಿಜ್ಯ ಕಾಲೇಜು,

| ಕ್ರ. ಸಂ. | ಕವನದ ಶೀರ್ಷಿಕೆ | ಪುಟ ಸಂ. |
|---|---|---|
| 001 | ಎಡೆಯೋ ಮಡೆಯೋ | 1 |
| 002 | ಹರಿಹರಪ್ರಿಯರು | 3 |
| 003 | ಸನ್ಯಾಸಿ ಸಂಸಾರ | 4 |
| 004 | ಕಂಡದ್ದು ಕಾಣದ್ದು | 5 |
| 005 | ಅನ್ನಿಸಿಕೆ | 6 |
| 006 | ಹುಷಾರ್ | 7 |
| 007 | ತಾಯ್ತನ | 8 |
| 008 | ಸಂವಿಧಾನ, ಸಂ ವಿಧಾನ | 9 |
| 009 | ದುರಾಸೆ | 10 |
| 010 | ಪ್ರಕೃತಿ ಮುಂದೆ ನೀನೆಷ್ಟು ಅಲ್ಪ ಮಾನವಾ | 11 |
| 011 | ಇಂದಿನ ಸೀರಿಯಲ್‌ಗಳ ದುರಂತ | 12 |
| 012 | ಮರ್ಕಟಮನ | 14 |
| 013 | ಮಾನವತೆ | 15 |
| 014 | ರೈತ ತತ್ವ | 16 |
| 015 | ಬದುಕಿತೋರಿಸಿ ಜಗಕೆ | 17 |
| 016 | ಬಂದಿತು ಮತ್ತೊಂದು ಹೊಸವರುಷ | 18 |
| 017 | ಸಿನಿಮಾ ಎಂಬ ದುರಂತ | 19 |
| 018 | ಸಮಯ ಹೃದಯ | 20 |

| | | |
|---|---|---|
| 019 | ಆಲೋಚನೆ | 21 |
| 020 | ದೇಹವೆಂಬ ಸೋಜಿಗ | 22 |
| 021 | ಬುದ್ಧಿವಾದ | 24 |
| 022 | ಗೌರವ ಡಾಕ್ಟರೇಟುಗಳು | 25 |
| 023 | ಹನಿಗವನಗಳ ಗುಚ್ಛ | 26 |
| 024 | ಏನೂ ಆಗದಿದ್ದರೂ ಏನೋ ಆದವನು | 30 |
| 025 | ಮೋಸಂ ಸರ್ವಮಯಂ | 32 |
| 026 | ಅವರಿವರ ಹುಳುಕಹುಡುಕಿ | 33 |
| 027 | ಮುಸುಕು | 34 |
| 028 | ಕಾ ವೇರಿ | 35 |
| 029 | ಎಲ್ಲವೂ ದ್ವಂದ್ವ | 37 |
| 030 | ತಾಯ ಋಣ | 38 |
| 031 | ಚಾನಲ್ಲುಗಳ ಮನರಂಜನೆ | 39 |
| 032 | ಎಲ್ಲರೂ ಅಗಸ್ತ್ಯರೇ | 41 |
| 033 | ನಲ್ಲ ನಲ್ಲೆ, ಎಷ್ಟು ದಿನ ಈ ಲಲ್ಲೆ | 42 |
| 034 | ಗುಜರಿ | 43 |
| 035 | ನಾರಿ ಮುನಿದರೆ ಮಾರಿ | 44 |
| 036 | ವೃತ್ತಿ ವೈವಿಧ್ಯ | 46 |
| 037 | ನಾನಿನಗೆ, ನೀನೆನಗೆ | 48 |
| 038 | ರಾಜಕಾರ್ಯ | 50 |
| 039 | ಸೃಷ್ಟಿಕರ್ತನ ಅಚಾತುರ್ಯ | 51 |
| 040 | ಜನನಾಯಕರೋ, ಜನಸೇವಕರೋ | 52 |
| 041 | ದಂಗೆ ಎದ್ದ ಅನ್ನದಾತ | 54 |
| 042 | ಗೋಸುಂಬೆಗಳು | 55 |

| | | |
|---|---|---|
| **043** | ಉಗ್ರಕನ್ಯೆಯರು | 56 |
| **044** | ಕ್ಷಣಿಕ ನೋಟದ ಸುಖ | 57 |
| **045** | ಇಳೀಬೇಡ ಕಾಣದ ನೀರಿಗೆ ಚಿನ್ನ | 58 |
| **046** | ಆಸ್ಥಾನದ ಕಥೆ | 59 |
| **047** | ಯಾರು ನಿಜವಾದ ಅನಾಥರು | 60 |
| **048** | ನಿಮ್ಮವರಾಗಿಸಿಕೊಳ್ಳಿ | 62 |
| **049** | ಸಾಮಾಜಿಕ ಹೊಣೆಗಾರಿಕೆ | 63 |
| **050** | ಸ್ವಾಗತವು ಉಗಾದಿಗೆ | 64 |
| **051** | ಹೆಣ್ಣು ಭ್ರೂಣಹತ್ಯೆ | 65 |
| **052** | ಬಾಹ್ಯರೂಪದ ಅಂತರಂಗ | 66 |
| **053** | ವೀರಯೋಧನಿಗೆ ನಮನ | 67 |
| **054** | ಪರೋಪಕಾರಿಗಳಿವರು | 69 |
| **055** | ಸೋತುಗೆದ್ದವರು | 70 |
| **056** | ಪ್ರಿಯತಮ | 71 |
| **057** | ಮಾನವತೆಯ ದಾನವತೆ | 72 |
| **058** | ಹರಿಹರಕಥೆಯೋ ಸಿನಿಕತೆಯೋ | 73 |
| **059** | ದಾಸೋಹದ ಆನಂದ | 75 |
| **060** | ಡಬ್ಬಲ್ ಹೆಲ್ಮೆಟ್ ಫಜೀತಿ | 77 |
| **061** | ಸೋಲಿಗೆ ಸಾಂತ್ವನ | 78 |
| **062** | ಜೈ ಜವಾನ್, ಜೈ ಕಿಸಾನ್ | 79 |
| **063** | ಅಪಘಾತ ಕಲಿಸಿದ ಪಾಠ | 81 |
| **064** | ಮಧುರಾಬಾಯಿ | 82 |
| **065** | ಗೆಳೆಯ ತುಂಗರಿಗೊಂದು ಶ್ರದ್ಧಾಂಜಲಿ | 84 |
| **066** | ಯುಗಾದಿಗೆ ಸ್ವಾಗತ | 85 |

| | | |
|---|---|---|
| 067 | ಮುದುಡುತಿವೆ ಎಳೆಗಿಡಗಳು, ಕೊಳೆಯುತಿವೆ ಮುದಿಮರಗಳು | 86 |
| 068 | ದಾಹ | 88 |
| 069 | ಜೀವಿತಾನಂದ | 90 |
| 070 | ಬರುತಿದೆ ಪ್ರೇಮಿಗಳ ದಿನ | 91 |
| 071 | ನಿಶೆ, ನಶೆ, ಉಷೆ | 92 |
| 072 | ಭಯ ನಿರ್ಭಯ | 94 |
| 073 | ಕೋಲೆಬಸವರು | 97 |
| 074 | ಸಂಕ್ರಾಂತಿ ಸಡಗರ | 98 |
| 075 | ಹೊಸ ವರ್ಷ ಆಚರಣೆ ಯಾರಿಗೆ | 99 |
| 076 | ಕಠೋರ ಆದರೂ ಸತ್ಯ | 100 |
| 077 | ಶುರುವಾಗಿದೆ ಮತ್ತೆ ಮೌಢ್ಯಬಿತ್ತುವ ಸಮಯ | 102 |
| 078 | ಹೆಣ್ಣುಗಳೇ ಮರೆತಿರೇಕೆ | 104 |
| 079 | ಚುರುಮುರಿ | 105 |
| 080 | ಹೇಗಿದೆ ಈ ವಿಚಾರ | 106 |
| 081 | ದೇಹವೆಂಬ ಸೋಜಿಗ–2 | 108 |
| 082 | ಲುಕ್ಸಾನು ಯಾರಿಗೆ, ಲಾಭ ಯಾರಿಗೆ | 110 |
| 083 | ನವ್ಯ ಕವಿತೆ | 111 |
| 084 | ಸ್ಮಾರ್ಟ್ ಫೋನ್ | 112 |
| 085 | ಸ್ವಾಗತ ಗೀತೆ | 113 |
| 086 | ಎರಡೂ ಕೈ ಸೇರಿದರೆ ಚಪ್ಪಾಳೆ | 114 |
| 087 | ನಿತ್ಯ ಸತ್ಯ | 115 |
| 088 | ಜೀವನ ಚಕ್ರ | 116 |
| 089 | ಸೆಟ್ಟಿ ವ್ಯಾಪಾರ | 118 |
| 090 | ವಿಪರ್ಯಾಸ | 119 |

| | | |
|---|---|---|
| 091 | ಕವಿತೆಯಲ್ಲಿ ಏನಿರಬೇಕು | 120 |
| 092 | ಮಹಿಳೆಯರು ನಾವ್ ಮಹಿಳೆಯರು | 121 |
| 093 | ಬದುಕು ಚಕ್ರ – ತೀರ್ಥ | 122 |
| 094 | ಸ್ವರ್ಗ ನರಕ | 124 |
| 095 | ತೆರಿಗೆ ಚಮತ್ಕಾರ | 125 |
| 096 | ಕಾಡುತಿದೆ ನಿನ್ನ ನೆನಪು ಬಾಪು | 126 |
| 097 | ಬದುಕಿನ ವ್ಯಥೆ | 128 |
| 098 | ಕವನ ಹೇಗಿರಬೇಕು | 129 |
| 099 | ಬಂತು ಮತ್ತೆ ಉಗಾದಿ | 130 |
| 100 | ಬಾಕಿಯಿದೆ ಸ್ವೀಕೃತಿ | 131 |

## 1. ಎಡೆಯೋ ಮಡೆಯೋ

ಎಡೆಯೋ ಮಡೆಯೋ
ಅದ ನೀ ಬಿಡೆಯೋ
ಅವರೇ ಬಿಡರೋ
ಒಟ್ಟಿನಲ್ಲಿ ನೀವು ಬಿಡಿರೋ
ನಿಲ್ಲಿಸಿರೋ ಈ ಆಚರಣೆಯಾ ॥

ಶತಮಾನಗಳಿಂದ ಆಚರಣೆಯಲ್ಲಿದೆ
ಎಂಬೊಂದೇ ಕಾರಣಕೆ
ಪಾಲಿಸಬೇಡಿರೋ ಅದನ್ನು
ಅಪ್ಪ ಹಾಕಿದ ಆಲದಮರವೆಂದು
ನೇಣುಹಾಕಿಕೊಳ್ಳಬೇಡಿರೋ ಅದಕೆ ॥

ಸಿಗದಿದ್ದರೆ ಪೂರ ಎಲೆ
ಚೂರಾದರೂ ಇಟ್ಟು ತಲೆಮೇಲೆ
ಗಂಡಸರು ಹೆಂಗಸರೆನ್ನದೆ
ಉರುಳಾಡುವ ನಿಮ್ಮ ನೋಡಿದರೆ
ನೋವಾಗುತಿಹುದು ಮನಕೆ ॥

ಉಂಡ ಬಾಳೆಲೆಯ ಮೇಲುರುಳಾಡಿದರೆ
ಬರುವುದು ಪುಣ್ಯ ಎಂಬ ಭ್ರಮೆಬೇಡ
ನಾ ಮೇಲು ನೀ ಕೀಳು ಎಂಬ ಭೇದಬೇಡ
ನಿನ್ನ ಎಂಜಲಮೇಲೆ ಅವರನೇಕೆ ಉರುಳಾಡಿಸುವಿ ಮುನಿ ಯಾ
ಅವರೂ ನಮ್ಮಂತೆಯೇ ಮನುಜರಲ್ಲವೇನೋ ಮಡೆಯಾ ॥

ಏನ ಎಡೆಯೋ, ಎಡೆಗೆ ಮಡಿಯೋ
ಅವರಿವರ ಎಂಜಲೆಲೆಯ ಮೇಲೇಕೆ ಉರುಳಾಡುವಿರಿ
ಉರುಳಾಡಿರಿ ನಿಮ್ಮ ಮನೆಯವರ ಎಂಜಲೆಲೆಯ ಮೇಲೇ
ಯಾರ ಎಂಜಲಾದರೇನಂತೆ
ಎಂಜಲು ಎಂಜಲೇ ಅಲ್ಲವೇ ॥

ಬಿಡಿ ಗೋವುಗಳ
ತಿನ್ನಲಿ ಅವು, ಉಂಡ ಬಾಳೆಲೆಗಳ
ಬಾಳೆಲೆ ಎಂಜಲನ್ನ ತಿನ್ನುವುದು
ಪ್ಲಾಸ್ಟಿಕ್ ಕಾಗದ ತಿನ್ನುವುದಕಿಂತ ಲೇಸಲ್ಲವೇ
ಅವುಗಳ ಆರೋಗ್ಯವಾ ಕಾಪಾಡಬೇಕಲ್ಲವೇ ॥

ತೊಳಿ ಅವರ ಮೂಢನಂಬಿಕೆಗಳ
ನೀಡು ಅವರಿಗೂ ನಿನ್ನ ಆಚರಣೆಗಳ
ಆಗಲೀ ಅವರೂ ನಿನ್ನಂತೆ ಪವಿತ್ರರು
ನಿನಗೆ ಸಮಾನರು
ಎಲ್ಲರಿಂದ ಗೌರವಿಸಲ್ಪಡುವ ಮನುಜರು ॥

ಈಜಾಡಿ ನದಿಗಳಲಿ
ಸ್ನಾನಮಾಡಿ ಪುಣ್ಯಕ್ಷೇತ್ರಗಳಲಿ
ಒಡ್ಡಿಕೊಳ್ಳಿ ನಿಮ್ಮನ್ನೇ
ಪಂಚಕರ್ಮ ಚಿಕಿತ್ಸೆಗೆ
ನಿಮ್ಮ ಚರ್ಮರೋಗ ನಿವಾರಣೆಗೆ ॥

## 2. ಹರಿಹರಪ್ರಿಯರು :

ಬೆಳೆದುದ ತಿನ್ನುವವ ಹರಿಪ್ರಿಯ
ಕೊಂದುದ ತಿನ್ನುವವ ಹರಪ್ರಿಯ
ಎರಡನ್ನೂ ತಿನ್ನುವವ ಹರಿಹರಪ್ರಿಯ

## 3. ಸನ್ಯಾಸಿ ಸಂಸಾರ :

ಎಲ್ಲ ಬಿಟ್ಟವನ ಅಲ್ಲವೆ ಸನ್ಯಾಸಿ ಎನ್ನುವುದು
ಸಂಸಾರಿಯಾದ ಮೇಲಾಗಬೇಕು ಸನ್ಯಾಸಿ
ಇದು ನಿಯಮ
ಸನ್ಯಾಸಿಯಾದಮೇಲೆ ಸಂಸಾರಿಯಾಗುವುದು
ಯಾವ ನಿಯಮ ॥

ಬೇಕಾ ಸನ್ಯಾಸಿಗೆ ಮಠ
ಅದು ಬೇಕು ಭಕ್ತರಿಗೆ
ಬೇಕಾ ಸನ್ಯಾಸಿಗೆ ಅಡ್ಡಪಲ್ಲಕ್ಕಿ ಉತ್ಸವ
ಅದು ಬೇಕು ಭಕ್ತರಿಗೆ
ಒಟ್ಟಿನಲ್ಲಿ ಎಲ್ಲ ಗೂಬೆ ಕೂರುವುದು ಭಕ್ತರಮೇಲೆ ॥

ಬೇಕಾ ಸನ್ಯಾಸಿಗೆ ಒಡವೆ ವಸ್ತ್ರ
ಅದು ಬೇಕು ಭಕ್ತರಿಗೆ
ಬೇಕಾ ಸನ್ಯಾಸಿಗೆ ಭವ್ಯ ಬಂಗಲೆ
ಅದು ಬೇಕು ಮಠದ ಮರಿಗಳಿಗೆ, ವಿದ್ಯಾರ್ಥಿಗಳಿಗೆ
ತಮಗಾಗಿ ಏನೂ ಬೇಡರು ಈ ಸನ್ಯಾಸಿಗಳು ॥

ಬಯಲಾಗುತಿದೆ ಒಬ್ಬೊಬ್ಬರದೂ ಇತಿಹಾಸ
ಮಾಧ್ಯಮಗಳ ಮುಂದೆ
ಬೆತ್ತಲಾಗುತಿಹರು ಸಾರ್ವಜನಿಕರ ಮುಂದೆ
ಇವರ ಪರ ಅವರ ಪರ ವಾದಿಸಲು ಹಲವರು
ಅಂತಿಮ ನಿರ್ಣಯಕ್ಕೆ ನ್ಯಾಯಾಲಯ, ನ್ಯಾಯಾಧೀಶರು ॥

# 4. ಕಂಡದ್ದು, ಕಾಣದ್ದು

ನಡೆದಿಹುದೊಂದು ಸನ್ಮಾನ ಸಮಾರಂಭದಲ್ಲಿನ ಉದ್ಘಾಟನೆ
ಸೇರಿಹುದು ಭಾರೀ ಜನದಟ್ಟಣೆ।
ದೀಪಬೆಳಗಿಸಲು ಬಂತು ಗಣ್ಯರ ದಂಡು,
ಕೂತವರಿಗೆ ಕಂಡಿತ್ತು, ಬರೀ ಛಾಯಾಗ್ರಾಹಕರ ಅಂಡು॥

## 5. ಅನ್ನಿಸಿಕೆ

ಕಪ್ಪು ದೇವತೆಯ ಕನವರಿಕೆ ಬಗೆಗೆ ಅಂದು ಅವರಂದರು
ಹೂಬಿಟ್ಟ ಗಿಡಕೊಂದು ದುಂಬಿ ಬರಲಿಲ್ಲ ।
ಮುದಿ ಜೀವದ ಬಯಕೆಯ ಬಗೆಗೆ ಇಂದು ನಾನನ್ನುವೆ:
ಬರಲಿ ಬರಲಿ ಎಂದು ಬಯಸಿದರೂ ಸಾವು ಬರುತ್ತಿಲ್ಲ ॥

## 6. ಹುಷಾರ್:

ಕಚ್ಚಿತಂದ್ರೆ ಸೊಳ್ಳೆ
ಬಂದ್ರೆ ಮೈಮೇಲ್ ಗುಳ್ಳೆ,
ಹುಡ್ಕಿ ವೈದ್ಯರನ್ ಕೂಡ್ಲೇ
ತಪ್ಪಿದ್ರೆ ನಿಮ್ ಭೇಟಿ ಪರಲೋಕ್ದಲ್ಲೇ ॥

ಂದೆಲ್ಲಾ ಬೇವಿನದೋ, ಗಂಧದ್ದೋ
ಾಕುತ್ತಿದ್ದರು ಹೊಗೆ
ಂತರದ ದಿನಗಳಲ್ಲಿ ಬಂತು ಕಾಯಿಲ್ಲು, ಮ್ಯಾಟು
ಟ್ಟಿನಲ್ಲಿ ಮನೆತುಂಬ ಘಾಟು॥

ಇದೀಗ ಬಂದಿದೆ ಬ್ಯಾಟು, ಲಿಕ್ವಿಡ್ಡು
ಹೊಡೆದಿದೆ ಸೊಳ್ಳೆ ಅದಕ್ಕೂ ಸೆಡ್ಡು
ಸರ್ಕಾರವೇ ಉಸುರಿದೆ ಮಂತ್ರ
ಕಟ್ಟಿ ಸೊಳ್ಳೆಪರದೆ ಅನ್ನೋ ತಂತ್ರ॥

## 7. ತಾಯ್ತನ:

ತಾಯಾಗುತ್ತಿರುವವಳಿಗೆ ಮಾತ್ರಗೊತ್ತು
ಬೀಜಾಂಕುರದ ಆ ಸಮಯ
ದೂರಾಯಿತು ಹೆಣ್ಣಿನ ಮೇಲಿನ
ಬಂಜೆತನದ ಸಂಶಯ ॥

ಮೂರ್‍ನಾಲ್ಕು ತಿಂಗಳ ಬಳಿಕ ತಿಳಿಯಿತು
ಲೋಕಕದರ ವಿಚಾರ
ನವಮಾಸ ಕಳೆದ ನಂತರ ಪ್ರಸವದ
ಶುಭಸಮಾಚಾರ ॥

## 8. ಸಂವಿಧಾನ, ಸಂ ವಿಧಾನ

ಅನೇಕ ದೇಶಗಳಲ್ಲಿ ಸಂವಿಧಾನವೇ ಅಲಿಖಿತ
ಆದರೂ ದೇಶದ ಎಲ್ಲರೂ ಅದಕೆ ವಿಧೇಯ
ಅಲಿಖಿತವಾದರೂ ಅದಕೆ ತಿದ್ದುಪಡಿ ಎಂಬುದಿಲ್ಲ ॥

ಖಿತ ಸಂವಿಧಾನ ಇರುವ ದೇಶಗಳಲ್ಲಿ
ದಕಾಗಿದೆ ನೂರಾರು ತಿದ್ದುಪಡಿಗಳು
ನರ ನಡವಳಿಕೆಗಳಲ್ಲಾದ ಬದಲಾವಣೆಗಳು
ಂದವು ಸಂ ವಿಧಾನದ ತಿದ್ದುಪಡಿಗಳು ॥

ಕಾಡುತಿದೆ ಮನದಲಿ ಏಕೆ ಹೀಗೆ
ಜನಗಳಲ್ಲಿ ಸಂವಿಧಾನ
ಮುರಿಯುವ ಬಯಕೆ ॥

ುರಿಯಲು ಜನರೇನು,
ನನಾಯಕರೇನು ಯಾರು ಹಿಂದೆಯಿಲ್ಲ,
ನೂನಿನ ಹೆದರಿಕೆ ಇವರಾರಿಗೂ ಇಲ್ಲವೇ ಇಲ್ಲ ॥

ಬಯಸುತಿದೆ ಒಮ್ಮೊಮ್ಮೆ ಮನ
ಮಿಲಿಟರಿ ಸರ್ಕಾರ,
ನೆನೆದರೆ ಭಯವಾಗುತ್ತೆ
ತುಪಾಕಿಗಳ ಅಬ್ಬರ ॥

## 9. ದುರಾಸೆ:

ಏನಮಾಡಿದೆ ಮಾನವಾ
ಹಾಳಗೆಡವಿದೆ ಎಲ್ಲವಾ ॥

ಗಿರಿಕಾನನಗಳ ಬಿಡಲಿಲ್ಲ
ಕೆರೆ ಕರಾಬುಗಳನ್ನೂ ಬಿಡಲಿಲ್ಲ ॥

ಇಂದು ಬಾಯಿಬಡಿದುಕೊಳ್ಳುವಿಯೇಕೆ
ಕಾಡುಮಿಕಗಳ ಬೆಳೆಹಾನಿಯ ಬಗೆಗೆ ॥

# 10. ಪ್ರಕೃತಿ ಮುಂದೆ ನೀನೆಷ್ಟು ಅಲ್ಪ ಮಾನವ:

ಬೀಗಬೇಡ ಮಾನವ ನಾ ನಿನಗಿಂತ ಮುಂದೆ
ಎಂದೆಂದಿಗೂ ನೀ ಬೀಳುವೆ ಅದರ ಹಿಂದೆ ।
ಮುನಿದರೆ ಪ್ರಕೃತಿ ಖಚಿತ ನಿನ್ನ ಅಪಮೃತ್ಯು ತಿಳಿ
ಅದೇ ಅದು ನಕ್ಕರೆ ನಿನಗದೇ ಅಮೃತ ತಿಳಿ ॥

ತಿಳಿ ನಿನ್ನ ಪರಿಮಿತಿಯ
ಅರಿ ನಿನ್ನ ಮಿತಿಯ ।
ನೋಡಿದೆಯಾ ನೆರೆರಾಜ್ಯದವರ ಕಥೆಯಾ
ಅಲ್ಲಿನ ಮಂದಿಯ ವ್ಯಥೆಯಾ ॥

ನಿನ್ನಿನ ಕೋಟ್ಯಾಧಿಪತಿ,
ಆದ ಇಂದು ಭಿಕ್ಷಾಧಿಪತಿ ।
ಇರಬಹುದು ಬ್ಯಾಂಕಿನಲ್ಲಿ ಲಕ್ಷಲಕ್ಷ ಹಣ,
ಸಿಗದಿರೆ ಅನ್ನ, ನೀರು ಆಗುವೆ ನೀನು ಬೀದಿಹೆಣ॥

ಸಿಕ್ಕರೆ ಸಾಕು ಸೀಕಲಾದರೇನಂತೆ, ಹಳಸಿದರೇನಂತೆ
ಜೀವ ಉಳಿದರೆ ಸಾಕಂತೆ ।
ತಿಳಿ ಈಗಲಾದರೂ ನಿನ್ನ ಮಿತಿ
ಅರಿಯದೊಡೆ ಅಗುವುದು ನಿನ್ನ ಅಧೋಗತಿ ॥

# 11. ಇಂದಿನ ಸೀರಿಯಲ್‌ಗಳ ದುರಂತ

ಎಳೆಯಬೇಡಿರೋ ಚ್ಯೂಯಿಂಗ್ ಗಮ್‌ನಂತೆ
ನಿಮ್ಮ ಧಾರಾವಾಹಿಗಳನ್ನು,
ಕೆಣಕಬೇಡಿರೋ ನೋಡುಗರತಾಳ್ಮೆಯನ್ನು
ಮರೆಯಬೇಡಿರೋ ಅವರ ಕೈನಲ್ಲಿರೋ
ರಿಮೋಟ್ ಎಂಬ ಬಟನ್‌ನನ್ನು ॥

ನೋಡಿನೋಡಿ ಸಾಕಾಗಿದೆ
ನಿಮ್ಮ ಧಾರಾವಾಹಿಗಳ ಅತ್ತೆ ಸೊಸೆಯರ
ನಡುವಿನ ಜಗಳವನ್ನು
ಒಬ್ಬರಿಗೊಬ್ಬರು ಒಳಗೊಳಗೇ
ಬತ್ತಿಯಿಡುವ ಬಗೆಯನ್ನು ॥

ಬಲು ದೂರವಿಲ್ಲ ಆ ಕಾಲ
ಧಾರಾವಾಹಿಗಳ ಬಹಿಷ್ಕರಿಸುವ ಕಾಲ
ನೋಡುಗರೇ ಇಲ್ಲದಿರುವಾಗ
ಚಾನಲ್ಲುಗಳ 'ಟಿಆರ್‌ಪಿ' ಏರುವುದ್ಹೇಗೆ
ಅವುಗಳ ಮುಂದುವರಿಕೆ ಹೇಗೆ ॥

ಮೊದಲ ವರ್ಷದಲ್ಲಿನ ಸದಸ್ಯರು
ಆಗುವರು ದೊಡ್ಡವರು
ನಂತರದ ವರ್ಷದಲ್ಲಿ ಪ್ರವೇಶಿಸುವರು
ಎರಡನೇ ಸಂತತಿ ಅಂದ್ರೆ ಅವರ ಮಕ್ಕಳು
ಮತ್ತೂ ಮುಂದುವರೆದರೆ ಅವರ ಮೊಮ್ಮೊಕ್ಕಳು ॥

ಯಾರೇ ಬರಲಿ ಯಾರೇ ಹೋಗಲಿ
ಮುಂದುವರೆಯುವುದು ನಿಮ್ಮ ಕಥೆ ನಿರಂತರ
ಬತ್ತಿಯಿಡುವ ಕ್ರಿಯೆ ನಡೆಯುವುದು ನಿರಂತರ
ನಾಯಕರಿಗಿಂತ ಖಳನಾಯಕರೇ ಆಗಿಹರು ಎಲ್ಲ
ಕೊನೆಗೂ ಸಿಗುವುದಿಲ್ಲ ಅಂತ್ಯ ಇದಕೆಲ್ಲ ॥

## 12. ಮರ್ಕಟಮನ :

ಕೈ ಎಳೆಯುವುದು, ಕಾಲೆಳೆಯುವುದು,
ಇದ್ದರೆ ಬಾಲ ಎಳೆಯುವುದು
ಇವೆಲ್ಲ ವಾನರರ ಆಟ,
ನರರಾದ ನಮಗೇತಕೆ ಈ ಮಂಗಾಟ ॥

# 13. ಮಾನವತೆ

ಬಿಡಿ ನಿಮ್ಮ ಸಣ್ಣತನವ
ಆಗಬೇಕು ನೀವು
ಆಗಲೆಬೇಕು ನೀವು
ಪುರಾಣಿಕರು ಹೇಳಿದಂತೆ
ಮೊದಲು ಮಾನವ ॥

ನೋಡಿ ಜಗದ ಜನರನೆಲ್ಲ
ಕಲಿಯಿರೆಲ್ಲರಿಂದ ಪಾಠವಾ
ದುರ್ಗುಣಗಳಿಗೆ ಬಿಡಿ ಎಳ್ಳುನೀರು
ಆಯ್ದುಕೊಳ್ಳಿ ಅವರ ಸುಗುಣವಾ
ಆಗಮಾತ್ರ ನೀವು ನಿಜಕೂ ಮಾನವ॥

# 14. ರೈತತತ್ವ

ಪೈರೆ ಬೆಳೆಸಲು ಬೇಕು
ಮೂರ್‍ನಾಲ್ಕು ತಿಂಗಳು
ಅದ ನಾಶಮಾಡಲು ಸಾಕು
ಕೆಲವೇ ಕೈಗಳು
ಇದಕ್ಕಲ್ಲವೇ ಅನ್ನುವುದು
ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ॥

ಸೃಷ್ಟಿಸುವವಕಿಂತ ಸಂಹಾರಕನಿಗೇ
ಹೆದರುವುದು ಈ ಲೋಕ
ಭಯವನ್ನೇ ಗೌರವ ಎಂಬ
ಭ್ರಮೆಯಲ್ಲಿರುವವನು ಆ ಸಂಹಾರಕ
ನಿಜದ ಅರಿವಾಗುವುದು ಅವನಿಗೆ
ತನ್ನಂತಹ ಇತರರು ತೀರಿಕೊಂಡ ಬಳಿಕ ॥

ತಿಳಿ ನೀ ಮಾನವ
ಆಗಬೇಡ ದಾನವ
ಬಿತ್ತಿದಂತೆ ಬೆಳೆ
ನೋಡದಿದ್ದಲ್ಲಿ ಕಳೆ
ನೀ ಬಯಸಿದಂತಿರುವುದು
ನಿನ್ನೀ ಇಳೆ ॥

## 15. ಬದುಕಿ ತೋರಿಸಿ ಜಗಕೆ

ಗೋಡೆ ಕಟ್ಟದಿರಿ ಗೆಳೆಯರೇ
ನಿಮ್ಮ ಸುತ್ತಲೂ
ಆಗುವಿರಿ ನಿಮ್ಮಷ್ಟಕ್ಕೇ ನೀವೇ
ದ್ವೀಪಗಳು ॥

ಬದುಕಿರುವವರ ಬಗೆಗೇ
ಲಕ್ಷ್ಯವಹಿಸದ ಮಂದಿ
ಸತ್ತವರ ಸ್ಮರಿಸುವರೇ
ಇಂದು ॥

ಬಾಳಬೇಕು ನಾವು
ಬದುಕಬೇಕು ನಾವು
ಎಲ್ಲರೆದುರಿನಲ್ಲಿ
ಎದೆಸೆಟೆದು ನಿಂತು ॥

ಬದುಕಿರುವೆವೆಂದು ತೋರಬೇಕು
ಈ ಜಗಕೂ
ಅವರ ನೆನಪಿನಲ್ಲುಳಿಯಬೇಕು
ಆಜನ್ಮಕೂ ॥

# 16. ಬಂದಿತು ಮತ್ತೊಂದು ಹೊಸವರು

ಬಂದಿತು ಮತ್ತೊಂದು ಹೊಸವರುಷ
ಸ್ಥರಿಯಿತು ನೇಪತ್ಯಕೆ ಒಂದು ವರುಷ
ಕೆಲವರ ಬಾಳಲ್ಲಿ ಉಣಿಸಿತು ಸಿಹಿ
ಮತ್ತೆ ಕೆಲವರಿಗೆ ಬರೀ ಕಹಿ ॥

ಪ್ರತಿ ವರುಷ ಬಂದಿತೆನ್ನುವ ಸಮಯದಲ್ಲಿ
ಎಲ್ಲರೂ ಬಯಸುವರು ಒಳ್ಳೆಯದನ್ನೇ
ಅದು ಆಗುವುದು ಬಿಡುವುದು ನಮ್ಮ ಕೈಲಿಲ್ಲ
ಹಾಗೆಂದು ಕೈಚೆಲ್ಲಿ ಕೂಡುವುದು ತರವಲ್ಲ ॥

ಏನೇ ಬರಲಿ ಬಿಡಲಿ
ಈಸಬೇಕು ಇದ್ದು ಜೈಸಬೇಕು
ಎನ್ನುವ ತತ್ವ ನಮ್ಮದಾಗಿರಬೇಕು
ಸದಾ ಒಳ್ಳೆಯದನ್ನು ಬಯಸಬೇಕು ॥

ಬಯಸಿರಿ ಎಲ್ಲರೂ ಎಲ್ಲರಿಗೂ
ಹ್ಯಾಪಿ ನ್ಯೂ ಇಯರ್
ಅದ ನಿಜ ಅಥವಾ ಸುಳ್ಳಾಗಿಸುವುದು
ಸ್ವೀಕರಿಸುವವರ ಹೊಣೆಯಾಗಿರುವುದು ॥

ನಮ್ಮ ಹೊಸವರುಷ ಈಗಲ್ಲದಿದ್ದರೂ
ಅದು ಬರುವ ಉಗಾದಿಯಾಗಿದ್ದರೂ
ಆಚರಿಸುತ್ತಿದ್ದೇವೆ ನಾವು
ಆಂಗ್ಲರ ಈ ಪಂಚಾಂಗವನ್ನು ॥

# 17. ಸಿನಿಮಾ ಎಂಬ ದುರಂತ

ಸಿನಿಮಾ ಎಂಬದೊಂದು ಮಾಯಾಜಿಂಕೆ
ಬೆನ್ನತ್ತಿಹೋಗದಿರಿ ಅದರಿಂದೆ ಜೋಕೆ
ಗೆದ್ದವರ ಲೆಖ್ಖ ಕೆಲವರದು ಮಾತ್ರ
ಸೋತವರ ಲೆಖ್ಖ ಇಟ್ಟವರಿಲ್ಲ ಗೊತ್ರಾ

ವಿಯ ಮುಗುದನ ಪಟ್ಟಣಕೆ ಕರೆತಂದು
ಡಿದರು ಸ್ಪರ್ಧಾ ವಿಜೇತನ ಅಂದು
ಅವಗೆ ಸಿನಿಮಾ ಹುಚ್ಚನು
ನವನು ಮಹಾನ್ ಹುಚ್ಚನು

ಮಾಡಲು ಹೊರಟಿರಿ ಅವನ
ಒಬ್ಬ ನಾಗರೀಕನ
ಅಂತ್ಯಗೊಳಿಸಿಕೊಂಡನವ
ತನ್ನ ಜೀವನವ

# 18. ಸಮಯ..... ಹೃದಯ

ಟಿಕ್ ಟಿಕ್ ಎನ್ನುತಿದೆ ಸಮಯ
ಲಬ್ ಡಬ್ ಎನ್ನುತಿದೆ ಹೃದಯ ।
ಸೆಲ್ ಬದಲಾಯಿಸಬೇಕು ತೋರಲು ಸಮಯ ।

ಕೆಲಸ ಮಾಡುತ್ತಲೇ ಇರುತ್ತದೆ ಉಸಿರಾಡಲು ಹೃದಯ
ಸಮಯ ನಿಂತರೂ ನಷ್ಟವಿಲ್ಲ
ಉಸಿರು ನಿಂತರೆ ಬದುಕೇ ಇಲ್ಲ ॥

## 19. ಆಲೋಚನೆ:

ಹುಟ್ಟು ಸಕಾರಾತ್ಮಕ
ಸಾವು ನಕಾರಾತ್ಮಕ
ಬದುಕು ವಿಚಾರಾತ್ಮಕ ॥

## 20. ದೇಹವೆಂಬ ಸೋಜಿಗ:

ಇದೆಂತಹಾ ಸೋಜಿಗ ಕೇಳಾ
ನಮ್ಮೀ ದೇಹದ ಕಾರ್ಯ ನೋಡಾ
ಸಕಲಜೀವಿಗಳ ವಿಕಾಸ
ಅಮೀಬಾಗಳಿಂದಂತೆ ॥

ಅಂಗೈಲಿವೆಯಂತೆ ಲಕ್ಷಾಂತರ ಬ್ಯಾಕ್ಟೀರಿಯಾಗಳು
ಕಾಣುವುವು ಸೂಕ್ಷ್ಮದರ್ಶಕದಲ್ಲಿ ಮಾತ್ರ ಆ ಜೀವಿಗಳು
ಇವುಗಳ ಸೃಷ್ಟಿಕರ್ತನಾರು
ಹೇಳಬಲ್ಲರೇ ವಿಜ್ಞಾನಿಗಳು ॥

ಬ್ಯಾಕ್ಟೀರಿಯಾಗಳಲ್ಲೂ ಇವೆ
ಒಳ್ಳೆಯವು ಮತ್ತೆ ಕೆಲವು ಕೆಟ್ಟವು
ಒಳ್ಳೆಯದ ಉಳಿಸಿ ಕೆಟ್ಟದ ಅಳಿಸುವ
ಕಾಯಕ ವಿಜ್ಞಾನಿಗಳ ಕೈಯಲ್ಲಿದೆಯಾ ॥

ಇವೆ ಪ್ರತಿ ಜೀವಿಗೂ ಹೃದಯ, ಶ್ವಾಸಕೋಶಗಳು
ಕೈಕಾಲು, ವಿಸರ್ಜನಾಂಗಗಳು
ಆ ಸೃಷ್ಟಿಕರ್ತನ ಕುಶಲಿ ಕಲಾಕಾರಿಕೆ ನೋಡಾ
ಒಂದಕ್ಕಿಂತ ಒಂದು ವಿಭಿನ್ನ ನೋಡಾ ॥

ಪ್ರತಿಜೀವಿಯ ಮೇಲಿರಬೇಕು ನಿಯಂತ್ರಣ
ಪ್ರಕೃತಿಯೇ ಹೇರಿದೆ ಆ ನಿಯಮ,
ಬಿಟ್ಟರೆ ಅನಿಯಂತ್ರಿತವಾಗಿ ಬೆಳೆಯಲು
ಆಗುವುದು ಅನಾಹುತ ಖಂಡಿತ ॥

ುಕೋ ಮಾನವ
ೇಡ ನೀ ದಾನವ
ಿಯ ಅನುಸರಿಸಿದೊಡೆ
ಬದುಕುವೆ ನಡೆ ॥

ಅತಿ ದೊಡ್ಡ ಆನೆ, ತಿಮಿಂಗಿಲಗಳು
ಅತಿ ಸಣ್ಣ ಇರುವೆ, ಗೆದ್ದಲಹುಳುಗಳು
ಎಲ್ಲಕ್ಕೂ ಆಶ್ರಯ ನೀಡುವುದು ಪ್ರಕೃತಿ
ಇದಕಾಗಿ ಆ ದೈವಕ್ಕೆ ನಮ್ಮ ನಮನಗಳು ॥

ದತಿಂದು ಬದುಕಬೇಕು ಮತ್ತೊಂದು
ಕಾಗಿ ಹುಟ್ಟಬೇಕು ಸಾಕಷ್ಟು ಜೀವಿಗಳಿಂದು
ಬೇಕು ಅವುಗಳ ಬೆಳವಣಿಗೆಗೆ ಜಾಗ
ುತ್ತಿದ್ದಾನೆಯೆ ಮಾನವ ಅವಕ್ಕೆ ಜಾಗ ॥

## 21. ಬುದ್ಧಿವಾದ:

ಮಾನವರಿಗೂ ಮೀನಿಗೂ ಒಂದೇ ಬುದ್ಧಿವಾದ
ಬಾಯಿಬಿಟ್ಟರೆ ನಿಮಗಿರುವುದು ಜೀವಭಯ
ಬಾಯಿಬಿಡದಿರೆ ಎಂದೆಂದಿಗೂ ಅಭಯ ॥

ಬಾಯಿಬಿಟ್ಟರೆ ಆಗುವುದು
ಮೀನು ನೀರಿನಿಂದ ಹೊರಗೆ
ಮನುಷ್ಯ ನೀರಿನೊಳಗೆ ॥

ಬದುಕಬೇಕೆನಿಸಿದರೆ ದೀರ್ಘಕಾಲ
ಮುಚ್ಚಿಕೊಂಡಿರಬೇಕು ಬಾಯಿ
ನಿಮ್ಮ ಪಾಡಿಗಿರಬೇಕು ನೀವು ॥

## 22 ಗೌರವ ಡಾಕ್ಟರೇಟುಗಳು :

ಗೌಡರನ್ನು 'ಏನ್ ಗೌಡಾ' ಎಂದರೆ
ಕೆಕ್ಕರಿಸಿನೋಡುವರು,
ಇತರರನ್ನು 'ಏನ್ ಗೌಡಾ' ಎಂದರೆ
ಕಸಿವಿಸಿಗೊಳ್ಳುವರು
ಅದೇ ವಿ.ವಿಯವರು ಯಾರನ್ನೇ 'ಗೌಡಾ' ಎಂದು ಕರೆದರೂ
ಹೆಮ್ಮೆ ಪಡುವರು

# 23. ಒಂದು ವಾಟ್ಸಪ್ ಹಿಂದಿ ಕವನದಿ ಪ್ರೇರಿತವಾದ ಹನಿಗವಿತೆಗಳ ಗ

**ರೇಖೆಗಳ ಮಹತ್ವ:**

ಏನೆಂದು ಹೇಳಲಿ ಗೆಳೆಯಾ ಗೆರೆಗಳ ಮಹತ್ವವ
ಹಣೆಯ ಮೇಲೆಳೆದರೆ ಆಗುವುದು ಹಣೆಬರಹ
ನೆಲದ ಮೇಲೆಳದರೆ ಆಗುವುದದು ಗಡಿರೇಖೆ
ದೇಹದ ಮೇಲೆಳೆದರೆ ಚಿಮ್ಮಿಸುವುದು ರಕುತ
ನಡುವೆ ಎಳೆದರೆ ಸಂಬಂಧಗಳ ಮಧ್ಯದ ಚೀನಾ **ಗೋಡೆ** ॥

**ಪುಷ್ಪಹರಣ:**

ಹೊರಟೆ ದೇವನ ಪೂಜಿಸಲು
ನನ್ನ ಪಾಪಗಳಿಗೆ ಪರಿಹಾರ ಕೋರಲು
ಮಾಡಲುಹೋಗಿ ದೇವನಮನ
ಮಾಡಿದೆ ಪುಷ್ಪಹರಣ ॥

ಕಲ್ಲದೇವರ ಸಂಪ್ರೀತಿಸಲು ಹೋಗಿ
ಎಳೆಯಹೂಗಳ ಕತ್ತುಕೊಯಿದೆ
ಒಂದು ಪಾಪದ ಪರಿಹಾರಕಾಗಿ
ಮತ್ತೊಂದು ಪಾಪವಮಾಡಿದೆ ॥

**ವಿಪರ್ಯಾಸ:**

ವ್ಯಕ್ತಿ ಜೀವಂತವಿರುವಾಗ
ನೀರಿನಲ್ಲಿ ಮುಳುಗುವನು
ವ್ಯಕ್ತಿ ಮೃತನಾದಾಗ
ನೀರಿನಲ್ಲಿ ತೇಲುವನು
ಇದೆಂತಹ ವಿಪರ್ಯಾಸ ಗೆಳೆಯಾ ॥

**ಜೀವನದ ಗೆರೆ:**

ಬದುಕು ನೇರಗೆರೆಯಂತಿರಬೇಕು
ಎಂದು ಬಯಸುವವರೇ ಎಲ್ಲರೂ
ಆದರೆ ಹೃದಯದ ಬಡಿತದ ಗೆರೆ
ನೇರವಾಗಿದ್ದರೆ ನಿಂತಂತೆ ಉಸಿರು
ಅದು ವಕ್ರವಾಗೇ ಇರಬೇಕು
ನಾವು ಬದುಕಿರುವವರೆಗೂ ॥

**ಬೆವರ ಬೆಲೆ:**

ಮೊದಲೆಲ್ಲ ಖುಷಿಯಾಗಿದ್ದೆ
ನನ್ನೆಲ್ಲ ಆಸೆಗಳ ಪೂರೈಕೆಮಾಡಿಕೊಳ್ಳುತ್ತಲಿದ್ದೆ
ಹಿರಿಯರ ಹಣದಿಂದ ॥

ಇಂದಿನ ನನ್ನ ದುಡಿಮೆ ಸಾಲದಾಗಿದೆ
ಒಪ್ಪೊತ್ತಿನ ಕೂಳಿಗೆ, ಗಂಜಿಗೆ
ಹಣದ ಕಷ್ಟ ಅರಿವಾಗಿದೆ ಎನಗೆ ॥

ಅರ್ಥವಾಗುತ್ತಿಲ್ಲ ಗೆಳೆಯಾ ನಾವೇಕೆ ದುಡಿಯುತ್ತೇವೆ
ಬದುಕಲು ದುಡಿಯುತ್ತೇವೆಯೋ
ಅಥವಾ ದುಡಿಯಲು ಬದುಕಿದ್ದೇವೆಯೋ ॥

ನಿನ್ನ ಜೇಬು ತುಂಬಿರುವಾಗ
ಮುತ್ತುವರು ಮಿತ್ರರು ಹೀರುವರು, ತಿನ್ನುವರು
ನಿನ್ನ ಹೊಗಳುವವರೇ ಎಲ್ಲರೂ ॥

ಜೇಬು ಖಾಲಿಯಾದಕೂಡಲೇ ದೂರ ಸರಿಯುವರು ಅದೇ ಮಿತ್ರರು
ಹುಡುಕಿಹೊರಡುವರು ಮತ್ತೊಬ್ಬ ಮಿತ್ರನನ್ನು,
ಜೇಬು ತುಂಬಿದವನನ್ನು ॥

**ನಿರ್ಜೀವಿಗಳ ಪಾಠ:**

ನೋಡು ಗೆಳೆಯಾ ನಿನ್ನ ಸುತ್ತಮುತ್ತಲ ವಸ್ತುಗಳ
ಬೋಧಿಸುತ್ತಿವೆ ಅವುಗಳೂ ನಮಗೆ ಬದುಕಿನ ಪಾಠವ ॥

ಕಿಟಕಿ ಬಾಗಿಲುಗಳು ಹೇಳುತ್ತಿವೆ ತೆರೆ ನಿನ್ನ ಮನವೆಂದು
ಗಡಿಯಾರ ಉಪದೇಶಿಸುತ್ತಿದೆ ಕಾಲವನ್ನು ಕಡೆಗಣಿಸದಿರೆಂದು ॥

ಪಂಖಗಳು ಬೀಸಿ ತಿಳಿಸಿವೆ ಮೆದುಳ ತಂಪಾಗಿಟ್ಟುಕೊಳ್ಳೆಂದು
ಕನ್ನಡಿ ಹೇಳುತ್ತಿದೆ ನಿನ್ನ ನೀ ತಿಳಿಯೆಂದು ॥

ಕಡೆಗಣಿಸದಿರು ಗೆಳೆಯಾ
ಅವು ನಿರ್ಜೀವಿಗಳೆಂದು ॥

**ಜೀವನವೆಂಬ ನಾಟಕ:**

ತಿಳಿ ಗೆಳೆಯಾ ಇಲ್ಲಿ ಎಲ್ಲವೂ ಕೃತಕ
ಆಡಬೇಕು ದಿನನಿತ್ಯ ನಾಟಕ ॥

ನೋವಿದ್ದರೂ ನಗಬೇಕು
ಹಸಿವಿದ್ದರೂ ತೇಗಬೇಕು ॥

ಒಟ್ಟಿನಲ್ಲಿ ಬದುಕಬೇಕು
ಅದಕಾಗಿ ಯಾವ ದಾರಿಯನ್ನಾದರೂ

ಹಿಡಿಯಬೇಕು ॥

**ಅಸಾಧ್ಯ ಪ್ರಶ್ನೆ/ಉತ್ತರ:**

ಕೇಳಿದರು ಯಾರೋ ನನ್ನ
ದೊಡ್ಡವನಾದಮೇಲೆ ಏನಾಗಬಯಸುವೆ ಎಂದು
ಮತ್ತೆ ಮಗುವಾಗಬಯಸುವೆ ಎಂದೆ ನಾನು
ಆದರೆ ನನಗನಿಸದು ಅದು ಸಾಧ್ಯವಾಗುವುದೆಂದು ॥

**ಹೊಟ್ಟೆಕಿಚ್ಚು:**

ಈ ಜಗವೇ ಹಾಗೆ ಗೆಳೆಯ,
ಒಲೆ, ದೀಪ ಹತ್ತಿಸಲು ಬೇಕು ಬೆಂಕಿಕಡ್ಡಿ
ಇಲ್ಲಿ ಅದರ ಅವಶ್ಯಕತೆಯೇ ಬರುವುದಿಲ್ಲ॥

ಒಬ್ಬರು ಮತ್ತೊಬ್ಬರ ನೋಡಿದರೇ ಉರಿದುಬೀಳುತ್ತಾರೆ
ಇತರರ ಏಳಿಗೆಯನ್ನು ಸಹಸದೇಹೋದರೂ
ಅವರ ಅಧಃಪತನ ಕಂಡು ಒಳಗೊಳಗೇ ಹರ್ಷಿಸುತ್ತಾರೆ ॥

**ಜೀವನ ಮಂಗಳ:**

ಮಂಗಳನ ಅಂಗಳಕ್ಕೆ ನೆಗೆಯಲು
ಯತ್ನಿಸುತ್ತಿದ್ದರೂ ಮಾನವ
ತನ್ನ ಜೀವನದಲ್ಲಿ ಮಂಗಳವ
ಕಾಣದಾಗಿದ್ದಾನೆ ಈ ಮಾನವ

## 24. ಏನೂ ಅಗದಿದ್ದರೂ ಏನೋ ಅದವ[illegible]

ಚಿಕ್ಕಂದಿನಿಂದಲೇ ಇರುವರು ಕೆಲವರು
ಜೀವನದ ಬಗೆಗೆ ಕನಸುಗಳ ಕಂಡವರು
ಇದಕೆ ತದ್ವಿರುದ್ಧ ಇದ್ದವ ನಾನು
ಗೊತ್ತುಗುರಿ ಏನೂ ಇಲ್ಲದವನು ॥

ಅಪ್ಪ ಹೇಳಿದರೆಂದು ಸೇರಿದೆ ದೊಡ್ಡಿಯಂತ ಸ್ಕೂಲಿಗೆ
ತೆಗೆದುಕೊಂಡೆ ವಾಣಿಜ್ಯ ಅವರ ಸಲಹೆಯಂತೆ
ಪದವಿಗೆ ಸೇರಿದೆ ಪದವಿಯ ಮುಗಿಸಿದೆ
ಸಿಡಿದೆದ್ದು ಮೊದಲ ನೌಕರಿಗೆ ಸೇರಿದೆ ॥

ಕೊನೆಗೂ ಮಣಿದು ತಂದೆಯ ಒತ್ತಾಯಕ್ಕೆ
ಮುಂದುವರೆಸಿದೆ ಉನ್ನತ ವ್ಯಾಸಂಗವನ್ನು
ಹುಡುಕಿಕೊಂಡು ಬಂತು ಉದ್ಯೋಗ ನಾನಿದ್ದಲ್ಲಿಗೆ
ಕೊನೆಗೆ ನಾನೂ ಒಬ್ಬ ಅಧ್ಯಾಪಕನಾದೆ ॥

ತಪ್ಪು ಒಪ್ಪುಗಳಿಂದ ಪರಿವರ್ತನೆಗೊಂಡೆ
ಜನಪ್ರಿಯ ಅಧ್ಯಾಪಕನೆನಿಸಿಕೊಂಡೆ
ಹೊರಿಸಿದರು ದೊಡ್ಡದೊಡ್ಡ ಜವಾಬ್ದಾರಿಗಳ
ಪಡೆದೆ ಪ್ರತಿಫಲರೂಪದಲ್ಲಿ ಖಾಯಿಲೆಗಳ ॥

ಯಶಸ್ವಿ ಕಾರ್ಯಕರ್ತ ನೆನೆಸಿಕೊಳ್ಳಲು ಬೇಕು
ಸಹಕಾರ ಜೊತೆಗಾರರದು, ಸಹೋದ್ಯೋಗಿಗಳದು
ಕೆಲಸ ಅವರದಾದರೂ, ಸಿಗುವುದು ನನಗೆ ಹೆಸರು
ಆದರು ಅವರೆಲ್ಲರೂ ಬರೀ ನೇಪಥ್ಯದ ಕಲಾವಿದರು ॥

ಕರಿಬೇವಿನಂತೆ ಎಲ್ಲ ನೌಕರರು
ಕೆಲಸವಾದನಂತರ ಹೊರಬಿಸಾಕಲ್ಪಡುವರು
ಮರೆತೇಬಿಡುವರು  ಸಹೋದ್ಯೋಗಿಗಳು ಸ್ನೇಹಿತರು
ಇನ್ನು ಕೇಳಬೇಕೇ ಆಡಳಿತ ಮಂಡಳಿಯವರ ॥

# 25. ಮೋಸಂ ಸರ್ವಮಯಂ:

ಎನ್ನುವರು ವ್ಯಾಪಾರಂ ದ್ರೋಹಚಿಂತನಂ,
ಅದರ ಬಗೆಗೆ ಮಾಡಿದರೂ ಎಷ್ಟೇ ಮಂಥನಂ
ಆಗುವುದಿಲ್ಲ ಏನೂ ಪ್ರಯೋಜನಂ ॥

ಹಿಂದೆಲ್ಲ ಇತ್ತು ತೂಗುತಕ್ಕಡಿ,
ತೂಗುವಾಗ ಆಗುತ್ತಿತ್ತು ಬಾನಗಡಿ
ಆಗುತ್ತಿದ್ದೆವು ಗ್ರಾಹಕರು ಬೆಪ್ಪುತಕ್ಕಡಿ ॥

ತಂದರು ಮೆಟ್ರಿಕ್ ತಕ್ಕಡಿ
ಮೋಸವಾಗದು ಎಂದರು ಕೊಳ್ಳುವ ಮಂದಿ
ತೂಕದಲ್ಲೇ ಮಾಡತೊಡಗಿದರು ಮೋಸ ॥

ಕೇಳಬೇಕೆ ವರಸೆ ಅಕ್ಕಸಾಲಿಗರ
ತಮ್ಮವರಿಂದಲೇ ಕದಿಯುವರು ಬಂಗಾರ
ಇನ್ನು ಕೇಳಬೇಕೆ ಪಾಡು ಬಡಪಾಯಿ ಗ್ರಾಹಕರ ॥

ತೂಕದಲ್ಲಿ ಮೋಸ,
ಅಳತೆಯಲ್ಲಿ ಮೋಸ
ಎಲ್ಲೆಲ್ಲೂ ಮೋಸವೋ ಮೋಸ ॥

## 26. ಅವರಿವರ ಹುಳುಕಹುಡುಕಿ!

ರಾಮ,ಕೃಷ್ಣರ ಹುಳುಕ ಹುಡುಕುವಿರೇಕೆ,
ಹುಡುಕತೊಡಗಿ ನಿಮ್ಮ, ನಿಮ್ಮವರ ಹುಳುಕುಗಳ
ಕೆಣಕಿ, ಕೆದಕಿ ಆಸ್ತಿಕರ ಭಾವನೆಗಳ
ಹಾರಿಸುವಿರೇನು ವಿಜಯಪತಾಕೆಗಳ
ನೋಯಿಸುವಿರೇಕೆ ಬಹುಜನರ ಭಾವನೆಗಳ ॥

ದೇವರಿಗೂ ಮಾನವರಿಗೂ ಇರುವುದು ಅಲ್ಪ ವ್ಯತ್ಯಾಸ
ದುರ್ಗುಣಗಳಿಗಿಂತ ಸುಗುಣಗಳು ಹೆಚ್ಚಿದ್ದಲ್ಲಿ ದೈವತ್ವ
ಸುಗುಣಗಳಿಗಿಂತ ದುರ್ಗುಣಗಳೇ ಹೆಚ್ಚಿದ್ದಲ್ಲಿ ದಾನವತ್ವ
ದೇವರ, ದೆವ್ವಗಳ ಆಯ್ಕೆಗೆ ಇದೇ ಮಾನದಂಡ
ಹುಡುಕಿ ಇತರರ ಸುಗುಣಗಳ, ಬಿಡಿ ದುರ್ಗುಣಗಳ ॥

ಗಿಡಮರಗಳಲ್ಲಿ ಇದ್ದರೂ ಲಕ್ಷಾಂತರ ಎಲೆಗಳು
ಗಮನ ಹರಿಸುವರೆಲ್ಲರೂ ಅದರಲ್ಲಿನ ಹಣ್ಣುಗಳೆಡೆಗೆ
ಇದ್ದರೂ ಗುಲಾಬಿಗಿಡದಲ್ಲಿ ಸಾವಿರಾರು ಮುಳ್ಳುಗಳು
ನಮ್ಮ ಗಮನವೇನಿದ್ದರೂ ಗುಲಾಬಿ ಹೂಗಳಕಡೆಗೆ
ಹರಿಸಿ ನಿಮ್ಮೀ ಆಲೋಚನೆಗಳ ಸುಗುಣಗಳೆಡೆಗೆ ॥

# 27. ಮುಸುಕು

ಇದೆಂತಹ ವಿಪರ್ಯಾಸ
ಮೃತನ ಪತ್ನಿ ದುಃಖದಿಂದ
ಮುಖಮುಚ್ಚಿಕೊಂಡು ಅಳುತ್ತಿದ್ದರೆ
ಕ್ಯಾಮರಾಕ್ಕೆ ಮುಖತೋರಿಸೆಂದು
ಮುಸುಕು ತೆಗೆಯುತ್ತಾರೆ ॥

ಹೀನಕೃತ್ಯ ಎಸಗಿರುವ
ಆರೋಪಿ/ಅಪರಾಧಿಗೆ ಮಾತ್ರ
ಮುಖಕ್ಕೆ ಮುಸುಕು ಹಾಕುತ್ತಾರೆ
ಮಾನವ ಆಯೋಗಕ್ಕೆ ಹೆದರಿ
ಜನರ ಕಣ್ತಪ್ಪಿಸುತ್ತಾರೆ ॥

# 28. 'ಕಾ' - ವೇರಿ

ಎನಿತು ವರ್ಣಿಸಲಿ ತಾಯೆ ನಿನ್ನ ಉದಾರತೆಯ,
ಸಹಸ್ರ, ಸಹಸ್ರ ವರ್ಷಗಳಿಂದ ತಣಿಸುತಿಹೆ ಎಮ್ಮಯ ದಾಹವ ।
ಎಷ್ಟು ನೀಡಿದರೂ ಸಾಲದೆಂದು ಕಿತ್ತಾಡುತ್ತಿರುವರು ತಮ್ಮ ಪಾಲಿಗೆ,
ನಿನ್ನೆದೆ ಬರಿದಾದರೆ ಬೀಳುವುದು ಅವರ ಬಾಳು ಬೆಂಕಿಗೆ ॥

ನೀ ನೀಡಿದರೂ ಉದಾರವಾಗಿ ನೀರ ನಾಡಿಗೆ,
ಪಾಲಿಕೆಗಳು ವಸೂಲಿಮಾಡುತಿಹವು ಅದಕೆ ಬಾಡಿಗೆ ।
ನಡೆಯುತಿಹುದು ಮೋಸ ನೀರ ವಿತರಣೆಯಲ್ಲಿ,
ಗಳಿಸುತಿಹರು ಕೋಟಿ ಕೋಟಿ ನಿನ್ನ ಹೆಸರಿನಲ್ಲಿ ॥

ವರ್ಷ ವರ್ಷಗಳೇ ಕಳೆದರೂ ಕಿತ್ತಾಟ ತಪ್ಪಲಿಲ್ಲ ,
ರಾಜಕಾರಣಿಗಳ ಹೂಟ ಮುಗಿಯಲಿಲ್ಲ ।
ಸಮಸ್ಯೆ ತೀರುವುದು ಅವರಾರಿಗೂ ಬೇಕಿಲ್ಲ ,
ಪ್ರತಿ ಐದು ವರ್ಷಕ್ಕೆ ಪ್ರತಿಪಕ್ಷಗಳಿಗೆ ಮತಪಡೆಯಲು ಅದು ಬೇಕಲ್ಲ ॥

ಅಧಿಕಾರ ಹಿಡಿಯಲು ಇರುವುವು ಹಲವಾರು ಅಸ್ತ್ರಗಳು
ರಾಜಕೀಯದಲ್ಲಿ ಮುಂದೆಬರಲು ನೀರ ಶಾಸ್ತ್ರಗಳು ।
ಸಮಸ್ಯೆ ಬಗೆಹರಿಸುವುದಾಗಿ ಹೇಳುತ್ತಾರೆ ರಾಜಕಾರಣಿಗಳು
ಮನದೊಳಗೇ ಉಳಿಸಲು ಹೆಣಗುತ್ತಾರೆ ಶಾಶ್ವತವಾಗಿ ಸಮಸ್ಯೆಗಳ ॥

**ತಲಕಾ**ವೇರಿಯಲ್ಲಿ ಜನಿಸಿ,
ಆದಿ ರಂಗ, ಮಧ್ಯ ರಂಗ, ಅಂತ್ಯ ರಂಗರ ಸವರಿ
ಬಂಗಾಳ ಕೊಲ್ಲಿಯ ಸೇರುವ ಕಾವೇರಿ
ನಿನಗೆ ಆಗಬೇಕು ಧನ್ಯರು ನಾವೂರಿ ॥

ಇದ್ದುದ ಹಂಚಿಕೊಂಡು ಬದುಕುವುದು ಯಾರಿಗೂ ಬೇಕಿಲ್ಲ,
ನೆರೆ ರಾಜ್ಯದವರಿಗಂತೂ ಬೇಕೇಬೇಕು ಸಿಂಹಪಾಲು ।
ಒಡ್ಡುವರು ಕಾನೂನಿನ ಉಲ್ಲಂಘನೆಯ ಹೆಸರ,
ನಮ್ಮವರು ಬೆದರಿ ಬಿಡುವರು ರಾತ್ರಿಯಲಿ ನೀರ ॥

## 29. ಎಲ್ಲವೂ ದ್ವಂದ್ವ :

ಮದುವೆಯಾಗುವುದೋ
ಮದುವೆಯಾಗದಿರುವುದೋ
ಎಂಬುದೊಂದು ದ್ವಂದ್ವ ॥

ಮಾತಾಪಿತರು ಆರಿಸಿದವನನ್ನು ಮದುವೆಯಾಗುವುದೋ
ತಾ ಪ್ರೀತಿಸಿದವನ ಮದುವೆ ಆಗುವುದೋ
ಎಂಬುದೂ ಒಂದು ದ್ವಂದ್ವ ॥

ಮದುವೆಯಾಗಿ ತಾಯಾಗುವುದೋ
ಮದುವೆಯಾಗದೇ ತಾಯಾಗುವುದೋ
ಎಂಬುದು ಮತ್ತೊಂದು ದ್ವಂದ್ವ ॥

ತಾಯಾಗುವುದೋ,
ತಾಯಾಗದಿರುವುದೋ
ಎಂಬುದು ಮಗದೊಂದು ದ್ವಂದ್ವ ॥

## 30. ತಾಯ ಋಣ:

ತನ್ನ ತನುವಿನ ರಕ್ತ, ಮಾಂಸವ ಬಸಿದು
ಸೃಷ್ಟಿಸಿದಳು ತನ್ನ ಕರುಳಕುಡಿಯ
ಆ ತಾಯ ಋಣವ ಎಂದಿಗಾದರೂ
ತೀರಿಸಲು ಸಾಧ್ಯವೇ ನಿನಗೆ ಶಿಶುವೇ ॥

ಹುಟ್ಟಿದಾಕ್ಷಣ ಮೊಲೆಯೂಡಿಸಿ
ತಣಿಸಿದಳು ನಿನ್ನ ಹಸಿವ
ನೋವಮರೆತು ನಲಿದಳು
ನಿನ್ನ ತನ್ನೆದೆಗಪ್ಪಿ ॥

ತಾನು ಉಪವಾಸದಿಂದಿದ್ದರೂ
ನಿನಗೆಂದೂ ತಪ್ಪಿಸಲಿಲ್ಲ ಸಮಯಕ್ಕೆ ಆಹಾರ
ನೀನೆಲ್ಲಾದರೂ ಬಿದ್ದೀಯೆಂದು
ಮೈಯೆಲ್ಲಾ ಕಣ್ಣಾಗಿ ಬೆಳೆಸಿದಳು ನಿನ್ನ ॥

ಕೇಳು ಮಗುವೇ ನಿನಗೆಷ್ಟು ವಯಸ್ಸಾದರೂ
ನೀನು ನಿನ್ನಮ್ಮನಿಗೆ ಮಗುವೆ
ಇಲ್ಲವಾದಾಗ ಲಕ್ಷ್ಯವ್ಯಯಿಸಿ ತಿಥಿ ಮಾಡುವಬದಲು
ಬದುಕಿರುವಾಗಲೇ ಕೊಡು ಅವಳಿಗೆ ಸಕಲ ಸುಖವ ॥

## 31. ಚಾನಲ್ಲುಗಳ ಮನರಂಜನೆ:

ಅಂದು ಇದ್ದುದೊಂದೇ ಟೀವಿ ಚಾನಲ್ಲು
ಅದುವೇ ದೂರದರ್ಶನ ಟೀವಿ ಚಾನಲ್ಲು
ಎಷ್ಟು ಚಂದವಿತ್ತು ಆ ಟೀವಿ ಚಾನಲ್ಲು
ವಾರಾಂತ್ಯದಲ್ಲಿ ರಾಷ್ಟ್ರಪ್ರಶಸ್ತಿವಿಜೇತ ಚಿತ್ರಗಳು

ಪ್ರತಿಸಂಜೆ ಚಂದದ ಕನ್ನಡ ಚಿತ್ರಗೀತೆಗಳು
ಎಲ್ಲರ ಮೆಚ್ಚುಗೆಗೆ ಪಾತ್ರವಾದ ಕಾರ್ಯಕ್ರಮಗಳು ॥
ನಂತರ ಬಂದವೆರಡು ಟೀವೀ ಚಾನಲ್ಲುಗಳು
ಒಂದು 'ಈ ಟೀವೀ' ಮತ್ತೊಂದು 'ಉದಯ' ಟೀವೀ

ಸಾರ್ವಜನಿಕರಿಗೆ 'ಪಬ್ಲಿಕ್' ಟೀವಿ, ಪ್ರಜೆಗಳಿಗೆ 'ಪ್ರಜಾ' ಟೀವಿ,
ರೆಡ್ಡಿಗಳದು 'ಜನಶ್ರೀ' ಟೀವಿ ಕುಮಾರಣ್ಣನ 'ಕಸ್ತೂರಿ' ಟೀವಿ ॥
ನಡುವೆ ತೂರಿದವು 'ಜ಼ೀ ಟೀವಿ' 'ಟೀವಿ 9' 'ಬಿಟೀವಿ'
'ಸುವರ್ಣ ಟೀವಿ' 'ಸಮಯ' ಟೀವೀಗಳು

ಕನ್ನಡಕ್ಕೆಂದೇ ಬಂದ 'ಚಂದನ' ಟೀವಿ
ಜೊತೆಗೆ ಸಣ್ಣಪುಟ್ಟ ಸ್ಥಳೀಯ ಚಾನಲ್ಲುಗಳು
ಒಟ್ಟಿನಲ್ಲಿ ಎಲ್ಲ ಭಾಷೆಗಳ 999 ಚಾನಲ್ಲುಗಳು
ಯಾವುದನ್ನು ನೋಡುವುದು ಯಾವುದನ್ನು ಬಿಡುವುದು ॥

ತಲೆನೋವು ಆಗಿದೆ ವೀಕ್ಷಕರಿಗೆ
ಆದರೂ ಸಿಕ್ಕಿದೆ ಬದುಕು ಸಾವಿರಾರು ಕಲಾವಿದರಿಗೆ,
ತಂತ್ರಜ್ಞರಿಗೆ, ಸಂಗೀತಗಾರರಿಗೆ
ಸಿಕ್ಕುತಿದೆ ಮನೆಯಲ್ಲಿಯೇ  ಭರಪೂರ ಪುಕ್ಕಟೆ ಮನರಂಜನೆ ॥

## 32. ಎಲ್ಲರೂ ಅಗಸ್ತ್ಯರೇ:

ಇಂದೆಲ್ಲರೂ ಜಗದೊಳಗೆ ಅಗಸ್ತ್ಯರೇ
ಎಂತಹ ವಿಷವನಾದರೂ ಅರಗಿಸಿಕೊಳ್ಳುವವರೇ ।
ಬಾರುಗಳಲಿ ಹೀರುವರು ಗರಳವ
ತೂರಾಡುತ್ತಲಾದರೂ ಸೇರುವರು ಗೃಹವ ॥

ಸಿಗುವುದೆಲ್ಲ ಕಲಬೆರಕೆ ಆಹಾರ
ತಿಂದು ತೇಗುವರು ಅದನೆ ಅಗಸ್ತ್ಯರಂತೆ ।
ನೀಡಿದರಿಂದು ಅವರಿಗೆ ಪರಿಶುದ್ಧ ಆಹಾರ
ಅರಗಿಸಿಕೊಳ್ಳಲಾಗದೇ ಒದ್ದಾಡುವರು ನಿರಂತರ ॥

ನೆನಪಾಗಲಿಲ್ಲವೇ ಆ ಅಗಸ್ತ್ಯರು
ವಾತಾಪಿಯನ್ನು ಜೀರ್ಣಿಸಿಕೊಂಡವರು ।
ಇಲ್ವಲ ವಾತಾಪಿಯನ್ನು ಇಲ್ಲವಾಗಿಸಿದವರು
ಇರುವರಿಂದು ಎಲ್ಲವ ಇಲ್ಲವಾಗಿಸುವವರು ॥

## 33. ನಲ್ಲ ನಲ್ಲೆ ಈ ಲಲ್ಲೆ ಎಷ್ಟುದಿನ!

ನೀ ನಲ್ಲೆ, ನೀ ನಲ್ಲ ಎಂದು
ಮಾತುಮಾತಿಗೂ ಅನ್ನುತ್ತಿದ್ದೆವು ನಾವು ಅಂದು,
ಅದೇ ಮದುವೆಗೆ ಮುಂದು ॥

ನೀನಲ್ಲೇ, ನಾನಿಲ್ಲೇ ಎನ್ನುತ್ತಿದ್ದೇವೆ ಇಂದು
ಮದುವೆ ಮುಗಿದ ಮಾರನೇ ದಿನದಂದು
ತಿರುಗಿ ಬರಬಾರದೇ ಆ ದಿನಗಳು ಮತ್ತೊಮ್ಮೆ ॥

ಕಾಣಿರಿನ್ನು ಬರೀ ಕನಸುಗಳ, ಕಳೆದುಹೋದ ದಿನಗಳ,
ತಿಳಿಯಿರಿ ನಿಮ್ಮ ಸೌಭಾಗ್ಯ ಎಂದಂದು
ಜಗಳ ಆಡದೇ ಕಳೆದ ದಿನದಂದು ॥

ಮಕ್ಕಳಾದಮೇಲಂತೂ ತೆಗೆದುಬಿಡಿ,
ಆ ಪದಗಳನ್ನು ನಿಮ್ಮ ಪದಕೋಶದಿಂದ
ಅದಿಲ್ಲ, ಇದಿಲ್ಲ ಎಂಬ ಗೊಣಗಾಟವೇ ದಿನವೆಲ್ಲ ॥

# 34. ಗುಜರಿ:

ಬಹುಷಃ ಕಾಣಲಾರೆವು ಇತರ ದೇಶಗಳಲ್ಲಿ
ಹಳೇ ಅನುಪಯುಕ್ತ ವಸ್ತುಗಳ ಬಿಕರಿ
ಅದ ಕರೆಯವುದೇ ಗುಜರಿ ॥

ಬಿಸಾಡುವರು ಕೆಟ್ಟ, ಹಳೇ ವಸ್ತುಗಳ
ಶ್ರೀಮಂತರು ಎಲ್ಲ ದೇಶಗಳಲ್ಲಿ
ಕೊಳ್ಳುವರು ವಿನೂತನ ಮಾಡಲ್ಲುಗಳ ॥

ನಮ್ಮವರ ರೀತಿಯೇ ಬೇರೆ
ನೋಡುವರು ಅದ ದುರಸ್ಥಿಮಾಡಿಸಲು
ಮತ್ತೆ ಮತ್ತೆ ಅದ ಬಳಸಲು ॥

ಈ ನಡತೆ ಸೀಮಿತ ಮಾತ್ರ ವಸ್ತುಗಳಿಗೆ
ಅನ್ವಯಿಸಲಾರರು ಮುದಿ ತಂದೆತಾಯಿಯರಿಗೆ
ಹುಡುಕುವರು ಕಳುಹಿಸಲು ವೃದ್ಧಾಶ್ರಮಗಳಿಗೆ ॥

ವೃದ್ಧಾಶ್ರಮಗಳ ತೆರೆದಿರುವುದೇ
ಆಸರೆ ಒದಗಿಸಲು ಅನಾಥ ಜೀವಿಗಳಿಗೆ
ಸ್ವಂತದವರೇ ತಳ್ಳುವರು ಇವುಗಳಿಗೆ ॥

# 35. ನಾರೀ ಮುನಿದರೆ ಮಾರಿ:

ಹೆಣ್ಣೇ ಆಗಿರಬಹುದು ಪ್ರಕೃತಿ
ಅಬಲೆಯಲ್ಲ ಅವಳು
ತೋರುವಳು ತನ್ನ ಶಕ್ತಿ
ಅವಶ್ಯಕತೆಯನನುಸರಿಸಿ ॥

ಮಕ್ಕಳ ತುಂಟತನ ಮಿತಿಮೀರಿದಾಗ
ತನ್ನ ಮೇಲಿನ ವಿಕೃತಿ ಸಹಿಸಲಾಗದಾಗ
ಪ್ರವಾಹದ ರೂಪಿನಲ್ಲೋ, ಭೂಕಂಪನದ ರೀತಿಯಲ್ಲೋ
ಸರಿಪಡಿಸಿಕೊಳ್ಳುವಳು ತನ್ನ ಭಾರವ ॥

ನಮ್ಮ ನಡುವಿನ ಮಹಿಳೆಯರೂ ಅಷ್ಟೇ
ಅಗಾಧ ಸಹನೆ ಪ್ರದರ್ಶಿಸುವರು
ಸಹಿಸಲಸದಳವಾದ ಸಮಯದಲ್ಲಿ
ಸಿಡಿದು ಸೆಟೆದು ನಿಲ್ಲುವರು ॥

ಹೆಣ್ಣು ಅಬಲೆಯಲ್ಲ
ಪುರುಷನಿಗಿಂತ ಸಬಲಳು
ಎಂತಹ ಕಷ್ಟಗಳಿಗೂ ಅಂಜಳು
ನಿಭಾಯಿಸಿ ಮೇಲೆಬರುವಳು ॥

ಎಂತಹ ಗಟ್ಟಿಗಿತ್ತಿ ಹೆಣ್ಣು ಎಂಬುದ
ತಿಳಿಯಲು ಸಾಕು ಒಂದೇ ಉದಾಹರಣೆ
ಅದು ಮಗುವನ್ನು ಹಡೆಯುವ ನೋವ
ಊಹಿಸಬಲ್ಲನೇ ಪುರುಷ ಅಂತಹ ನೋವ ॥

ಸತ್ತರೂ ತನ್ನ ಪತಿ ಸಲಹುವಳು ತನ್ನ ಸಂತಾನ
ಇರಬಲ್ಲನೇ ಪತ್ನಿ ಸತ್ತಾಗ ಪತಿ, ಸಲಹಬಲ್ಲನೇ ತನ್ನ ಸಂತಾನ
ಬೇಕವನಿಗೆ ಮತ್ತೊಬ್ಬ ಸತಿ, ಸಲಹಲು ತನ್ನ ಮೊದಲ ಸಂತಾನ
ತೋರಿಕೆಗೆ ಮಾತ್ರ ಸಬಲ, ನಿಜವಾಗಿ ಆತನೇ ದುರ್ಬಲ ॥

# 36. ವೃತ್ತಿ ವೈವಿಧ್ಯ:

ಹಿಡಿಯುವರು ಬದಕಿನ ಗ್ಲಾಡಿ ಎಳೆಯಲು ವಿವಿಧ ವೃತ್ತಿ
ಇರಬಹುದು ಅದು ಅಧಿಕಾರಿ ವೃತ್ತಿ ಯಾ ಗುಲಾಮನ ವೃತ್ತಿ
ಒಟ್ಟಿನಲ್ಲಿ ಸಿಗಬೇಕು ನಡೆಸಲು ಜೀವನ ಆದಾಯಗಟ್ಟಿ ॥

ವಿದ್ಯಾವಂತರೂ ಹಿಡಿದಿಹರು ಹೊಸದೊಂದು ವೃತ್ತಿ
ದೇಹಶ್ರಮ, ಮಿದುಳು ಶ್ರಮವಿರದ ವೃತ್ತಿ
ಅದುವೇ ಬಲು ಸುಲಭವಾದ ಭಿಕ್ಷಾವೃತ್ತಿ ॥

ಭಿಕ್ಷಾವೃತ್ತಿ ಬಗೆಗೆ ಮೂಗುಮುರಿಯದಿರಿ
ಶ್ರೀಮಂತ ಭಿಕ್ಷುಕರೂ ಇರುವರು ಎಂಬುದ ಮರೆಯದಿರಿ
ಹತ್ತಾರು ಮದುಮಕ್ಕಳಿಗೆ ತಾಳಿ, ಓಲೆ ಕೊಟ್ಟ ಭಿಕ್ಷುಕರೂ ಇದ್ದಾರ್ರೀ॥

ಸುಲಭವಾಗಿ ಹಣಮಾಡುವವರು ಹಿಡಿಯುವರು
ಮತ್ತೊಂದು ವೃತ್ತಿ, ಅದುವೇ ಕಳ್ಳತನದ ವೃತ್ತಿ
ವಾಹನವೊಂದಿದ್ದರೆ ಮಾಡುವರು ಸರಗಳ್ಳತನದ ವೃತ್ತಿ ॥

ನಾಲ್ಕಾರು ಕಟ್ಟಡಗಳು, ಐಷಾರಾಮಿ ಕಾರುಗಳ ಹೊಂದಿರುವವರು
ಇಬ್ಬರು ಮೂವರು ಹೆಂಡಿರನ್ನು ಸಾಕುತ್ತಿರುವವರೂ
ನಡೆಸುತ್ತಿದ್ದಾರೆ ಕಳ್ಳತನದ ವೃತ್ತಿ ಆದರೂ ಅವರೂ ನಿರುದ್ಯೋಗಿಗಳು ॥

ಮೊದಲಾದರೆ ಗುರುತು ಹಿಡಿಯಬಹುದಿತ್ತು ಒಬ್ಬರದಾದರೂ ಚಹರೆಯ
ಹೆಚ್ಚಾಗಿ ಬಳಸುತ್ತಿದ್ದರು ಬ್ಲ್ಯಾಕ್ ಪಲ್ಸರ್ ಬೈಕಾ
ಡಬ್ಬಲ್ ಹೆಲ್ಮೆಟ್ ಬಂದಮೇಲೆ ಕಾಣದಾಯಿತು ಇಬ್ಬರ ಚಹರೆಯೂ ॥

ಸಿಗದಾದರು ಕಳ್ಳತನಮಾಡಿದ ಸವಾರರು
ಸಿಸಿಟೀವಿಯಲ್ಲಿ ಕಂಡುಬಂದರೂ ಅವರು
ಆರಕ್ಷಕರ ಪಾಲಿಗೆ ತಲೆನೋವಾದರು ॥

## 37. ನಾನಿನಗೆ, ನೀನೆನಗೆ:

ಬಾ ಹತ್ತಿರ, ನನ್ನ ಹತ್ತಿರ,
ಸಾಗಬೇಕು ನಾವು ಪರಸ್ಪರ,
ಬಾಳದೋಣಿಯಲಿ ಬಹುದೂರ ॥

ಸೋತುಹೋದೆ ನಾನಂದು,
ನಿನ್ನ ನೋಡಿದಂದು
ನೀನೆ ನನ್ನ ಬಾಳಸಂಗಾತಿ ಆಗಬೇಕೆಂದು ॥

ಕಟ್ಟೋಣ ನಾವಿಂದು
ನಮ್ಮ ಕನಸಿನ ಮನೆಯೊಂದ
ಎಂದೂ ಮುರಿಯದ ಸೌಧವೊಂದ ॥

ತೀರಿಸುವೆ ನಿನ್ನೆಲ್ಲ ಆಸೆಗಳ
ಉಳಿಸದೇ ಒಂದೂ ಕೊರತೆ
ನನ್ನ ಕೊನೆ ಉಸಿರಿರುವವರೆಗೆ ॥

ಬಯಸುವೆ ನಿನ್ನಿಂದಲೂ
ಅದೇ ರೀತಿಯ ಪ್ರೀತಿಯ
ಬದುಕಿರುವತನಕ ಅನವರತ॥

ಏರೋಣ ಕನಸಿನ ಪುಷ್ಪಕ ವಿಮಾನ
ಸಾಗೋಣ ಚಂದ್ರನೆಡೆಗೆ ಯಾನ
ಮಾಡಿಕೊಳ್ಳೋಣ ಅದನೆ ನಮ್ಮ ತಾಣ ॥

ನೀಡಿದರೆ ನನಗೊಂದು ಮುತ್ತು
ನೀಡುವೆ ನಾನು ಅದಕೆ ಹತ್ತು
ಸಾಗಲೀ ನಿರಂತರ ಅದರ ಮತ್ತು ॥

ಬೇಕು ವಂಶದಕುಡಿ ನಮಗೊಂದು
ಆಗದದು ನಮ್ಮನಡುವಿನ ತಡೆ ಎಂದೆಂದೂ
ಆಗಲದು ಪ್ರೀತಿ ಬೆಸೆಯುವ ಕೊಂಡಿ ಎಂದೆಂದೂ ॥

# 38. ರಾಜಕಾರ್ಯ

ಪೆದ್ದ ರಾಜಕಾರಣಿಗಳೋ, ದಡ್ಡ ರಾಜಕಾರಣಿಗಳೋ
ಅರಿಯ ಲಾರೆವು ನಿಮ್ಮ ಅಜ್ಞಾನವ,
ಪಡೆಯಬಾರದು ಸಾರ್ವಜನಿಕ ಸೇವಕರು ಉಡುಗೊರೆಗಳ
ಎಂಬ ಸರಳ ನಿಯಮವ ಅರಿಯದ ಅಜ್ಞಾನಿಗಳೋ ॥

ಲಂಚ ಪಡೆಯುವಾಗ ಸಿಕ್ಕಿಬಿದ್ದವನೊಬ್ಬ
ಅಲವತ್ತುಕೊಂಡ ಬರೀ ಪೇಪರ್, ಬೇರೆ ದುಡ್ಡಿಲ್ಲ
ಲಂಚ ಪಡೆಯುವುದು ಅಪರಾಧ
ಎಂಬುದ ಅರಿಯದವ ಪಾಪ ಅವ ॥

ಇದೇನು ಅವರ ಮುಗ್ಧತೆಯೋ, ನಟನೆಯೋ
ಅರಿಯದಾದೆವು ನಾವು ಜನಸಾಮಾನ್ಯರು
ಕಾನೂನಿಗೆ ಅಂಜುವವರು ನಾವಾದರೇ
ಕಾನೂನಿಗೆ ಅತೀತರು ಅವರು ॥

## 39. ಸೃಷ್ಟಿಕರ್ತನ ಅಚಾತುರ್ಯ

ಸೃಷ್ಟಿಯಲ್ಲಿ ಕೊಟ್ಟನಾ ಸೃಷ್ಟಿಕರ್ತ
ಸೌಂದರ್ಯವ ಹೆಣ್ಣುಗಳಿಗೆ
ಆದರವರು ಗಂಡುಗಳ ಪಾಲಿಗೆ ರಮ್,
ಅಂದರೆ ರಂಭೆ, ಊರ್ವಶಿ, ಮೇನಕೆಯರು ॥

ಆದರೂ ಏಕೀ ಸೋಜಿಗ ಅರಿವಾಗದು
ಪಕ್ಷಿಲೋಕದಲ್ಲಿ ಮಾಡಿದನವನೊಂದು ಎಡವಟ್ಟು
ಕೊಟ್ಟನವ ಅದೇ ಸೌಂದರ್ಯವ ಗಂಡು ನವಿಲಿಗೆ
ಆಕಸ್ಮಿಕವೋ, ಅಚಾತುರ್ಯವೋ ನಾನರಿಯೆ ॥

## 40. ಜನನಾಯಕರೋ, ಜನಸೇವಕರೋ?

ಪ್ರತಿ ಐದುವರ್ಷಕ್ಕೊಮ್ಮೆ ನೀಡುವರು ತಮ್ಮ ಮುಖದರ್ಶನವ
ಮುಗಿಯುವರು ತಮ್ಮ ಕರಗಳ ನಡುಬಗ್ಗಿಸುತ್ತ
ಕೂಲಿಮಾಡುತ್ತಿರುವವರು, ರೈತಾಪಿ ಬಂಧುಗಳು
ಎಲ್ಲರೂ ಧಣಿಗಳು ಚುನಾವಣೆ ಮುಗಿಯುವವರೆಗೂ ॥

ಚುನಾವಣೆ ಮುಗಿದುದೇ ತಡಾ ಮರೆಯುವರು ಮತದಾರರ,
ತಮ್ಮ ಗತಜೀವನ ಶೈಲಿಯ, ತಾವು ಜನಸೇವಕರೆನ್ನುವುದ,
ಬದಲಾಗುವರು ಜನನಾಯಕರಾಗಿ, ವೈಭವೋಪೇತ ಜೀವನ ನಡೆಸುವವರಾಗಿ
ಜನರ, ಮಾಧ್ಯಮದವರ ಪ್ರಶ್ನೆಗೆ ಉಢಾಫೆ ಉತ್ತರ ನೀಡುವವರಾಗಿ ॥

ಹಿಂದಿನ ಚುನಾವಣೆಗೆ ಮುನ್ನ ಇದ್ದ ಆಸ್ತಿ ಲೆಖ್ಖಕ್ಕೂ
ಮುಂದಿನ ಚುನಾವಣೆ ವೇಳೆಗೆ ಮಾಡಿಕೊಂಡಿರುವ ಆಸ್ತಿಲೆಖ್ಖಕ್ಕೂ
ಮಾಡಲಾಗುವುದಿಲ್ಲ ಯಾವುದೇ ತಾಳೆಪಟ್ಟಿಯ ಲೆಖ್ಖ
ಕಾರಣ ಯಾವುದಕ್ಕೂ ಇರುವುದಿಲ್ಲ ಸರಿಯಾದ ಲೆಖ್ಖ ॥

ಸಾರ್ವಜನಿಕ ಸೇವಕರೆಲ್ಲ ಇರುವರು ಗಾಜಿನ ಮನೆಯೊಳಗೆ
ಹೊರಗಿನವರಿಗೆ ಎಸೆದ ಕಲ್ಲು ತಿರುಗಿ ಬೀಳುವುದು ಎರಡಾಗಿ ತಮ್ಮ ಮನೆಗೇ
ಹೊರಸಹೊರಟರೆ ಆರೋಪ ಪರರಮೇಲೆ,
ತಿರುಗುಬಾಣವಾಗುವುದು ತಮ್ಮಮೇಲೇ,
ಕೊನೆಗೆ ಮುಚ್ಚಿಕೊಳ್ಳುವರು ಪರಸ್ಪರ ತಮ್ಮಗಳಮೇಲಿನ ಆರೋಪಗಳ॥

ಮಾಡಿಕೊಳ್ಳಬಾರದು ಆಸ್ತಿ, ಅರಗಿಸಿಕೊಳ್ಳಲಾಗದವರು,
ಮಾಡಿಕೊಂಡವರು ಹೆದರಬಾರದು ಬಂದಾಗ ತಮ್ಮ ಮೇಲೆ ಆರೋಪಗಳು
ಹುಡುಕುವರು ಕುಂಟು ನೆಪಗಳ ತಮ್ಮ ತಪ್ಪ ಮುಚ್ಚಿಕೊಳ್ಳಲು
ಹುರಿದುಂಬಿಸುವರು ತಮ್ಮ ಹಿಂಬಾಲಕರ ತಮ್ಮನ್ನು ಸಮರ್ಥಿಸಿಕೊಳ್ಳಲು ॥

ಮಂತ್ರಿಯಾದಕೂಡಲೇ ಆಗುವರು ಸರ್ವಜ್ಞರು,
ಸಕಲ ವಿಷಯಗಳಲ್ಲೂ ಪಾರಂಗತರು,
ಅವರೇ ವಿಜ್ಞಾನಿಗಳು, ಅವರೇ ತಂತ್ರಜ್ಞರು
ಅವರೇ ಬೋಧಕರು, ಅವರೇ ದಾರ್ಶನಿಕರು ॥

ಪ್ರತಿ ಅಧಿವೇಶನ ಪ್ರಾರಂಭ ಸಮಯದಲ್ಲೂ
ಕಾಯುವವು ವಿಪಕ್ಷಗಳು ಆಡಳಿತ ಪಕ್ಷವ ಹಣಿಯಲು
ಆ ನೆಪದಲ್ಲಿ ಅಧಿವೇಶನ ಸಮಯ ಹಾಳುಮಾಡಲು
ಆದರೂ ಮರೆಯುವುದಿಲ್ಲ ಭತ್ಯೆ ಪಡೆಯಲು ॥

ಹುಡುಕುತಿಹರು ಸರ್ವಕಾಲಕ್ಕೂ ಹಣಮಾಡುವ ಬಾಬುಗಳನ್ನು
ಹೆಣೆಯುತಿರುವರು ಮನಮೋಹಕ ಬಲೆಗಳನ್ನು
ಹೆಸರಿಸುವರು ಜನಪ್ರಿಯ ಯೋಜನೆಗಳನ್ನು
ಮೂರ್ಖರಾಗಿಸಲು ಜನಸಾಮಾನ್ಯರನ್ನು ॥

ವಿರೋಧ ಪಕ್ಷಗಳಲ್ಲಿರುವಾಗಿನ ಆಧ್ಯತೆಗಳು
ಇಲ್ಲವಾಗುವವು ಆಡಳಿತ ಪಕ್ಷವಾದ ತಕ್ಷಣ
ಅದುವರೆಗಿನ ಜನಸಾಮಾನ್ಯರ ಬಗೆಗಿನ ಕಾಳಜಿ
ಮಾಯವಾಗುವುದು ಆಡಳಿತ ಹಿಡಿದ ತಕ್ಷಣ ॥

ಕೇಳುವವರಿಲ್ಲ ಬಡಪಾಯಿ ಮತದಾರನ ಚುನಾವಣೆ ಬಳಿಕ,
ಮುಂದಿನ ಐದು ವರ್ಷಗಳವರೆಗೆ, ಹೊಲಿಯುವರು ಅವನ ಬಾಯಿಯ
ಆರೋಪಿಸಲಾಗದಂತೆ, ಪ್ರಶ್ನೆಗಳ ಕೇಳದಂತೆ,
ಆರೋಪಿಸಿದವರಮೇಲೆ ,ಹೊರಿಸುವರು ಸುಳ್ಳು ಮೊಖದ್ದಮೆಗಳ ತಳ್ಳುವರು ಜೈಲಿಗೆ॥

# 41. ದಂಗೆ ಎದ್ದ ಅನ್ನದಾತ:

ನೋಡಿದಿರಾ ಇಂದಿನ ಟ್ರಾಫಿಕ್ ಜಾಮ್,
ಮೇಕ್ರಿ ವೃತ್ತದ ಬಳಿ ಉಂಟಾದ ಟ್ರಾಫಿಕ್ ಜಾಮ್,
ನಿಲ್ಲಿಸಿದರೂ ಬ್ಯಾರಿಕೇಡ್ ರಸ್ತೆ ಮಧ್ಯೆ,
ಕಿತ್ತೆಸೆದರು ಹಸಿರು ಟವಲ್ ಹೊದ್ದ ರೈತರು ॥

ಮುನ್ನುಗ್ಗಿದರು ವಿಂಡ್ಸರ್ ಸೇತುವೆ ಕೆಳಗೆ,
ನಿಲ್ಲಿಸಲಾಗಲಿಲ್ಲ ರೈತರಮೆರವಣಿಗೆ,
ಬೀಸಲು ಶುರುಮಾಡಿದರು ಲಾಠಿಯ ಪೋಲೀಸರು,
ಚದುರಿ ಓಡಿಹೋದರು ಪ್ರತಿಭಟನಕಾರರು ॥

ಸದನದಲ್ಲಿ ತೂಕಡಿಸುತ್ತಿದ್ದರು ಮುಖ್ಯರು,
ಕೂಗಾಡುತ್ತಿದ್ದರೂ ವಿಪಕ್ಷ ಸದಸ್ಯರು,
ತೋರಲಿಲ್ಲ ಸೌಜನ್ಯ ಅನ್ನದಾತನ ಕೂಗಿಗೆ,
ಕಿವುಡಾದರು ಅನ್ನದಾತನ ಮನವಿಗೆ ॥

ಸುರಿಸಿದರು ರೈತರ ಮೈಯಲ್ಲಿ ರಕುತ,
ಮರೆತರು ತಾವು ಮನುಜರೆಂಬ ವಿಚಾರವ,
ಶಿಸ್ತಿನ ಹೆಸರಿನಲ್ಲಿ ಪಾಲಿಸಿದರು ಪೋಲೀಸರು,
ಮೇಲಿನವರ ಆದೇಶವ, ಮರೆತರು ಅನ್ನದಾತನ ನೋವ ॥

ಕೇಳುತ್ತಿರುವುದಾದರೂ ಏನನ್ನು ನಮ್ಮ ಹೋರಾಟಗಾರರು,
ಬೇಸಾಯಕ್ಕೆ ಶಾಶ್ವತ ನೀರಿನ ಸೌಲಭ್ಯವನ್ನು
ನೀಡದಿದ್ದಲ್ಲಿ ಅವರಿಗೆ ಜಲಭಾಗ್ಯ,
ಯಶಕಾಣುವುದೇ ನಿಮ್ಮ ಅನ್ನಭಾಗ್ಯ ॥

## 42. ಗೋಸುಂಬೆಗಳು:

ಬೀಸಿಸಿದರು ರೈತರ ಮೇಲೆ ಬೆತ್ತ
ಚಿಮ್ಮಿಸಿದರು ರೈತರ ಮೈಯಲ್ಲಿ ರಕ್ತ
ಸುರಿಸುತಿಹರಿಂದು ಮೊಸಳೆಕಣ್ಣೀರು
ಮನಕೆ ನೋವಾಗಿದೆಯೆಂದು ಬೊಗಳೆಬಿಡುತಿಹರು
ನಂಬಬೇಕು ಇವರ ಮಾತ ಜನಸಾಮಾನ್ಯರು ॥

ಪಡೆಯುತಿಹರಲ್ಲಿ ಚಿಕಿತ್ಸೆ, ಏಟುತಿಂದವರು
ಮಿಕ್ಕ ರೈತರಲ್ಲಿ ಬಂದ್ ನಡೆಸುತಿಹರು
ಶಾಸಕರಿಲ್ಲಿ ಗೋಲಿ ಲಗೋರಿ ಆಟ ಆಡುತಿಹರು
ತಿಳಿಯಿತಲ್ಲ ಇವರ ಮನದ ಇಂಗಿತ
ರೈತರ ಬಗೆಗಿನ ಇವರ ತುಡಿತ ॥

ಅರಿಯಿರಿ ನಿಮಗಾಗಿ ಇವರಾರೂ ಆಗರು
ನಿಮ್ಮ ಹೆಣವ ನೀವೇ ಹೊರಬೇಕು
ನಿಮ್ಮ ಬದುಕನ್ನು ನೀವೇ ಸರಿದೂಗಿಸಬೇಕು
ಪಡೆದು ಸ್ಥಳೀಯರ ಬೆಂಬಲವ
ಮಾಡಿಕೊಳ್ಳಬೇಕು ನೀರಿನ ವ್ಯವಸ್ಥೆಯ ॥

## 43. ಉಗ್ರ ಕನ್ಯೆಯರು:

ಇಂದು ಕಂಡುಬರುತ್ತಿದ್ದಾರೆ
ಎಲ್ಲೆಲ್ಲೂ ಉಗ್ರರು,
ಕಣ್ಣುಗಳನ್ನು ಬಿಟ್ಟು
ಉಳಿದೆಲ್ಲವನ್ನೂ ಮುಚ್ಚಿಕೊಂಡಿರುವವರು, ।
ಇವರು ನೀವು ತಿಳಿದುಕೊಂಡಿರುವ
ತಾಲಿಬಾನರಲ್ಲ,

ನಮ್ಮ ನಿಮ್ಮ ನಡುವಿನ
ಕಾಲೇಜುಕನ್ಯೆಯರು, ।
ಇವರ ಮುಖ ಮುಚ್ಚುವಿಕೆಗೆ ಕಾರಣ
ಭಯೋತ್ಪಾದನೆಯಲ್ಲ,
ತಮ್ಮ ಚರ್ಮದ
ಬಣ್ಣರಕ್ಷಣೆ ॥

## 44. ಕ್ಷಣಿಕ ನೋಟದ ಸುಖ:

ನಿಂತು ಅರೆಗಳಿಗೆ,
ಚಲಿಸಿತು ಕನಸಿನ ಮೆರವಣಿಗೆ
ಸಂಧಿಸಿತು ನೋಟ ಅರೆಗಳಿಗೆ,
ದೂರಾದೆವು ನಾವು ನಾನೆಲ್ಲೋ, ನೀನೆಲ್ಲೋ ॥

ನಿಂತ ಅರೆಗಳಿಗೆಯಲ್ಲೇ
ನಮ್ಮ ಮನದಕದವ ತಟ್ಟಿದೆ ನೀನು
ಕದಲಿತು ನಮ್ಮ ಚಿತ್ತ
ಆದೆವು ನಾವು ನಾನೆಲ್ಲೋ ನೀನೆಲ್ಲೋ ॥

ಕಂಡೆ ಬೆಳಕಿನ ಕಿರಣಗಳಂತೆ ನೀನು
ಪಸರಿಸಿದೆ ಬೆಳಕ ಎಲ್ಲಕಡೆ ನೀನು
ಮುದನೀಡಿದೆ ಮೃದುಸ್ಪರ್ಷದಿಂದ ನೀನು
ಉಳಿಸಿಕೊಳ್ಳಲಾರದೆಹೋದೆ ಅದ ನಾನು ॥

# 45. ಇಳಿಬೇಡ ಕಾಣದ ನೀರಿಗೆ ಚಿನ್ನ

ಇಳಿಬೇಡ ಮಗ, ಇಳಿಬೇಡ,
ಈಜುಬರದಿದ್ದರೆ ನೀರಿಗಳಿಬೇಡ ।
ಹೋಗಬೇಡ ಮಗ ಹೋಗಬೇಡ,
ಮುತ್ತತ್ತಿಯಂತ ಜಾಗಕ್ಕೆ ಹೋಗಬೇಡ,
ಎಂದೂ ಈಜಲು ಹೋಗಬೇಡ ॥

ಇಳಿದರು ಮಗ ಇಳಿದರೂ
ಮುತ್ತತ್ತಿಯಲ್ಲಿ ಮಾತ್ರ ಇಳಿಬೇಡ
ನುಂಗಿದೆ ಈಗಾಗಲೇ 140 ಜೀವಗಳ
ಅಲ್ಲಿನ ಸುಳಿಗಳು, ಬಂಡೆಗಳು
ನೀನು ಹೋಗಿ ಆ ಸಂಖ್ಯೆ ಹೆಚ್ಚಿಸಬೇಡ ॥

ನೀರಿಗಿಳಿಯುವ ಮುನ್ನ
ಮೊದಲು ಅಲೋಚಿಸು ಚಿನ್ನ
ನಿನ್ನ ಮನೆಯವರಿಗೆ ನೀನು ಚಿನ್ನ,
ಮಾಡಬೇಡ ಅವರ ಕೊರಗುವಂತೆ,
ಕಡೆಯವರೆವಿಗೂ ಸಾವಿನಿಂದ ನಿನ್ನ ॥

## 46. ಆಸ್ಥಾನದ ಕಥೆ:

ಎದುರಾಡಿದರೆ ರಾಜನಾಸ್ಥಾನದಲ್ಲಿ
ಬೀಳಬೇಕಾಗುತ್ತದೆ ಖಾರಾಸ್ತಾನದಲ್ಲಿ

ಉಗ್ರರಿರುವ ಪಾಕೀಸ್ತಾನದಲ್ಲಿ
ರಾಜನೂ ಇಲ್ಲ ಆಸ್ಥಾನವೂ ಇಲ್ಲ
ಇರುವುದೆಲ್ಲ ಖಲಿಸ್ತಾನ, ಖಬರಸ್ತಾನ॥

# 47. ಯಾರು ನಿಜವಾದ ಅನಾಥರು:

ಮನ್ನಕರಗದೆ ನಿಮಗೆ ಓ ಮಕ್ಕಳೇ
ತೋರುತಿಹರು ನಿಮ್ಮ ಹೆತ್ತವರನ್ನು ಟೀವಿಯಲ್ಲಿ
ಬಾಳುತಿಹರು ಅವರು ಅನಾಥರಾಗಿ,
ವೃದ್ಧಾಶ್ರಮಗಳಲ್ಲಿ, ಅನಾಥ ಕೇಂದ್ರಗಳಲ್ಲಿ
ಕಾಯುತಿಹರು ಇನ್ನೂ ನಿಮ್ಮ ಬರುವಿಕೆಗಾಗಿ
ಸುಳ್ಳು ಭರವಸೆಗಳ ಮೂಟೆಹೊತ್ತು ॥

ಓಡಿಹೋಗಿ ನೋಡಿರಿ ಬೆಳಗಾವಿಗೆ,
ಬಿಮ್ಸ್ ಆಸ್ಪತ್ರೆಯ ಆಶ್ರಯ ಕೊಠಡಿಗೆ,
ಬೆಳಕ ಚೆಲ್ಲಿದೆ ಸುವರ್ಣ ವಾಹಿನಿ ಲೋಕಕೆ
ಪರಿಚಯಿಸಿದೆ ನಿಮ್ಮ ಬೇಜವಾಬ್ದಾರಿಯ,
ಹೊತ್ತುಕೊಂಡರೆ ಇನ್ನಾದರೂ ಅವರ ಹೊಣೆಯ
ಆಗುವಿರಿ ನೀವು ತಂದೆತಾಯಿಯರಿಗೆ ತಕ್ಕ ಮಕ್ಕಳು ॥

ಅಲ್ಲಿರುವ ವೃದ್ಧ ಜೀವಗಳ ಸಾಕುವ ಹೊಣೆ ಹೊತ್ತಿರುವರು
ಸಮಾಜಸೇವಕರು, ಅವರ ದುಃಖಗಳಿಗೆ ಮರುಗಿದವರು,
ಇನ್ನೂ ತಡಮಾಡಿದರೆ ನಿಮ್ಮ ತಂದೆತಾಯಿಗಳಾಗುವರು,
ನಿಮಗೆ ಅಂದರೆ ತಮ್ಮ ಮಕ್ಕಳಿಗೇ, ಅಪರಿಚಿತರು,
ಒಳಿತಾಯಿತೆಂದು ಸುಮ್ಮನಾದರೆ ನೀವುಗಳು,
ಚಲಾಯಿಸಬಹುದು ಕಾನೂನನ್ನು ನಿಮ್ಮ ಮೇಲೆ, ಅವರು ॥

ಅವರಲ್ಲ ಇಂದು ನಿಜ ಅರ್ಥದಲ್ಲಿ ಅನಾಥರು,
ಆಗಿರುವಿರಿ ನೀವೇ ನಿಜವಾದ ಅನಾಥರು,
ತಂದೆತಾಯಿಯರಿದ್ದರೂ ಅವರಿಲ್ಲ ನಿಮ್ಮ ಪಾಲಿಗೆ
ಮೊಮ್ಮೊಕ್ಕಳಿಗಿರುವುದಿಲ್ಲ ತಾತ, ಅಜ್ಜಿಯರು
ಅತ್ಯಧಿಕವಾಗಿ ಪ್ರೀತಿಸುವ ತಾತ ಅಜ್ಜಿಯರು ॥

ನೆನಪಿಡಿ ಇಂದು ನಿಮ್ಮ ತಂದೆತಾಯಿಯರಿಗೆ
ನೀವು ನೋಡಿಕೊಂಡ ರೀತಿ, ಕೊಟ್ಟ ಕಷ್ಟ,
ನೋಡುತಿಹರು ನಿಮ್ಮ ಮಕ್ಕಳು
ನೀಡುವರು ಬರಲಿರುವ ದಿನಗಳಲ್ಲಿ
ನಿಮ್ಮ ಮಕ್ಕಳೂ ನಿಮಗೆ ಅದೇ ಕಷ್ಟ॥

## 48. ನಿಮ್ಮವರಾಗಿಸಿಕೊಳ್ಳಿ

ಹುಡುಕುವಿರೇಕೆ ಅವರಿವರ ಹುಳುಕುಗಳ
ಒಳಹೊಕ್ಕುನೋಡಿ ನಿಮ್ಮ ಬದುಕುಗಳ
ಎಲ್ಲರ ಬಾಳೂ ಅತ್ತೀಹಣ್ಣು
ಮೇಲೆ ಥಳಕು ಒಳಗೆ ಹುಳುಕು

ನೋಯಿಸದಿರಿ ಇತರರ ಮನಕೆ
ಬದುಕಲು ಬಿಡಿ ಅವರ ಹಿತಕೆ
ಅವರ ಬದುಕ ಅಪ್ಪಿಕೊಳ್ಳಿ
ಅವರನ್ನೂ ನಿಮ್ಮವರಾಗಿಸಿಕೊಳ್ಳಿ

## 49. ಸಾಮಾಜಿಕ ಹೊಣೆಗಾರಿಕೆ

ಉದ್ವೇಗದಲಿ ಆಡಿದ ಮಾತಿಗೆ
ದೂಡಿದಿರಿ ನನ್ನ ಸೆರೆಮನೆಗೆ
ದೂಡುವಿರೇನು ಅತ್ಯಾಚಾರಿಗಳನೆಲ್ಲ ಸೆರೆಮನೆಗೆ
ಅದುವೆ ನೀವು ನೀಡುವ ಸಾಮಾಜಿಕ ಕೊಡುಗೆ ॥

ಧುರಭಿಮಾನವಾಗಬಾರದು ನಿಮ್ಮ ನಡಿಗೆ
ಸದಭಿಮಾನವಾಗಬೇಕು ನಿಮ್ಮ ಕೊಡುಗೆ
ಅದುವೆ ಸಮಾಜಕೆ ಸಾರ್ಥಕ ಕೊಡುಗೆ
ನಮ್ಮ ನಿಮ್ಮಂತಹವರು ನೀಡಬಹುದಾದ ಕೊಡುಗೆ ॥

## 50. ಸ್ವಾಗತವು ಯುಗಾದಿಗೆ

ಯುಗಾದಿಗೆ ಹಸಿರುಟ್ಟು ಹೂಬಿಟ್ಟು
ಸಂಭ್ರಮಿಸುವುದು ಪ್ರಕೃತಿ
ಯುಗಾದಿಗೆ ಅದ ಕಿತ್ತು ನಾಶಮಾಡಿ
ಸಂಭ್ರಮಿಸುವುದು ಮಾನವನ ವಿಕೃತಿ ॥

ಪ್ರತಿ ಯುಗಾದಿಯಂದು ಪ್ರಕೃತಿ
ಕಂಗೊಳಿಸುವಳು ಹೂಬಿಟ್ಟು ಹಸಿರುತಳಿರುಟ್ಟು
ನಾವೇಕೆ ಕಂಗೊಳಿಸಬಾರದು
ನಮ್ಮ ಮನದ ತಮವ ತೊಳೆದು ॥

## 51. ಹೆಣ್ಣು ಭ್ರೂಣಹತ್ಯೆ

ನಲುಗಿ ಹೋಗುತಿವೆ ಜೀವಗಳು
ಕಮರಿಹೋಗುತಿವೆ ಕನಸುಗಳು
ಹತ್ಯೆಯಾಗುತಿವೆ ಹೆಣ್ಣುಭ್ರೂಣಗಳು ॥

ಹುಟ್ಟದಿರು ಹೆಣ್ಣಾಗಿ ಈ ಲೋಕದಲ್ಲಿ
ಹುಟ್ಟಿದರೆ ಕೊಲ್ಲುವರು ನಿನ್ನ ಭ್ರೂಣದಲ್ಲೇ
ಕಲ್ಲಾಗು ಪೂಜಿಪರು ನಿನ್ನ ದೇಗುಲದಲ್ಲಿ ॥

ನಿನಗಿಲ್ಲ ಸ್ವಂತಜೀವನ ಈ ಲೋಕದಲ್ಲಿ
ಕಾಡುವರು ಕಾಮಾಂಧರು ಕ್ಷಣಕ್ಷಣದಲ್ಲಿ
ಸಿಕ್ಕಿಬಿದ್ದರೂ ಪಡೆವರು ಜಾಮೀನು ಮರುಕ್ಷಣದಲ್ಲಿ ॥

ಹೆಣ್ಣಿಂದ ಜನುಮ ಹೆಣ್ಣಿಂದ ಲಾಲನೆಪಾಲನೆ
ಎಣೆಯುಂಟೆ ಹೆಣ್ಣಿನ ತ್ಯಾಗಪ್ರೇಮಕೆ
ಎಂದು ಅರಿವರು ಈ ಸತ್ಯ ಮೂಢಮಾನವತೆ ॥

## 52. ಬಾಹ್ಯರೂಪದ ಅಂತರಂಗ

ಬಾಹ್ಯರೂಪವಕಂಡು
ನೀ ನನ್ನ ಮೆಚ್ಚಿದೆ
ನಿನ್ನಂತರಂಗವಕಂಡು
ನಾ ನಿನಗೆ ಮನಸೋತೆ ॥

ಪ್ರೀತಿಗೆ ಜಯವಾಯ್ತು
ಹಿರಿಯರ ಕದನದಲಿ
ಕೈಹಿಡಿದು ಸಾಗಿದೆವು
ಬಾಳಪಯಣದಲಿ ॥

ಹೂವುಂಟು ಮುಳ್ಳುಂಟು
ಗುಲಾಬಿಯ ಗಿಡದಲ್ಲಿ
ಸುಖದುಃಖಗಳುಂಟು
ಬಾಳಪಯಣದಲಿ ॥

ಪ್ರೀತಿಯರಮನೆಯಸೇರಿ
ಮೊಗೆಮೊಗೆದು ಹೀರೋಣ ಪ್ರೀತಿಯ
ಬಾಳಬೊಗಸೆ ನೀರಿನಂತೆ
ಅದು ಕೈಯಿಂದಸೋರುವಮುನ್ನ ॥

ಬಾ ಗೆಳೆಯ ತೇಲೋಣ
ಬಾಳೆಂಬ ಬಾನಂಗಳದಿ ಜೋಡಿಹಕ್ಕಿಯಾಗಿ
ಪ್ರೇಮಗೀತೆಯ ಹಾಡುತ ಸಾಗೋಣ
ಪ್ರೇಮಕ್ಕೆ ಸಾವಿಲ್ಲವೆಂದು ಸಾರಿ ॥

# 53. ವೀರಯೋಧನಿಗೆ ನಮನ

ಹಾಗಿರಬೇಕು, ಹೀಗಿರಬೇಕು
ಹೇಗಿರಬೇಕು ಮಾನವ ಜನುಮ
ಯೋಧ ಹನುಮಂತಪ್ಪನಂತಿರಬೇಕು
ಸಾರ್ಥಕವಾಗಲು ಮಾನವಜನುಮ ॥

ನೀರ್ಗಲ್ಲಮೇಲೆ ಓಡಾಡಿ
ದೇಶಕಾಯುವ ಓ ದೇಶಪ್ರೇಮಿ,
ಪ್ರಕೃತಿಗೇ ಸವಾಲಾಗಿ ಕಳೆದೆ ನೀನು
ನೀರ್ಗಲ್ಲ ಒಳಗೆ ಆರುದಿನಗಳ ॥

ಸತಿಸುತರು ತೃಣರು ನಿನಗೆ
ದೇಶಸೇವೆಯ ಮುಂದೆ
ಸದಾ ಹೆಣ್ಣು ಹೊನ್ನು ಮಣ್ಣೆಂದು
ಬಡಿದಾಡುವ ನಾವೆಷ್ಟು ಅಲ್ಪರು ನಿನ್ನಮುಂದೆ ॥

ಈ ಪಾಪಿಗಳ ಲೋಕಕಾಯಲು
ನಿನ್ನ ಅಮೂಲ್ಯ ಜೀವತೆತ್ತೆ
ಅಮರ ಜೀವಿಗೆ ಸಾವಿಲ್ಲ
ಚಿರಂಜೀವಿ ನೀನಾದೆ ಎಲ್ಲರ ಮನದಲ್ಲಿ ॥

ಸ್ವಾರ್ಥ ಲಾಲಸೆಯ ಮುಂದೆ
ನಾನು ನನ್ನದು ನನಗೆ ಎನ್ನದೆ
ದೇಶಕಾಯುವ ವೀರಯೋಧನೆ
ಸಾರ್ಥಕವು ನಿನ್ನ ಜೀವನ ॥

ಮಳೆಯಲ್ಲಿ ಬಿಸಿಲಲ್ಲಿ ಹಸಿವಲ್ಲಿ
ಕ್ಷಣಕ್ಷಣವೂ ಅಪಾಯದಲ್ಲಿ
ದೇಶಕಾಯುವ ಯೋಧರೇ
ನಿಮಗೊಂದು ನನ್ನ ಸಲಾಮ್ ॥

ದೇಶಸೇವೆಯ ಮುಂದೆ
ಈಶಸೇವೆಯು ಎಲ್ಲಿಯದು
ಅದನರಿಯದ ಈ ಮೂಢರು
ಕಡೆಗಣಿಸುವರು ನಿನ್ನ ॥

ನಿನ್ನ ಕಾಯಕದಿಂದ
ನೆಮ್ಮದಿಯ ಕಂಡಿಹೆವು ನಾವೆಲ್ಲಾ
ನಿನ್ನ ಶ್ರಮಕೆ ಎಣೆಯುಂಟೆ
ಈ ಲೋಕದಲ್ಲಿ ॥

## 54. ಪರೋಪಕಾರಿಗಳಿವರು:

ಯಾರಿಗೆ ಯಾರೂ ಇಲ್ಲ
ಬಂಧುಗಳು ದೂರವೇ ಎಲ್ಲ
ಜೊತೆಗಿದ್ದವರೇ ನಮಗೆ ಎಲ್ಲ॥

ಜಾತಿಬೇಧದ ಹಂಗತೊರೆದು
ಮಾನವೀಯತೆಯ ಮೆರೆದು
ಕಡೆಗೆ ಆಗುವವರೆ ಆಪದ್ಭಾಂಧವರು ॥

ಮನುಜ ಕುಲಕೆ ಮಾದರಿಗಳು
ಕಷ್ಟಕ್ಕೆ ಸ್ಪಂದಿಸಿದವರು
ಇವರೇ ಸಾರ್ಥಕ ಜೀವಿಗಳು॥

## 55. ಸೋತು ಗೆದ್ದವರು :

ಅಂತೂ ಇಂತೂ  ಕೊನೆಗೂ ಗೆದ್ದೆ ವೆಂಕಟ್
ಜನರ ಅಪಾರ ಪ್ರೀತಿಯ
ಇದರಿಂದಲಾದರೂ ಸಿಗಲಿ ನಿನ್ನ ಮನಸ್ಸಿಗೆ
ಸಂತೋಷ, ತುಂಬಲಿ ನಿನ್ನ ಥೈಲಿ ॥

ನೋಡಿದೆ ನಿನ್ನ ಹೊಸ ಅವತಾರ
ಭಟ್ಟರ ಭರ್ಜರಿ ಲಿರಿಕ್ಕಿನ ಪರಪಂಚ
ಹೊಸ ರೀತಿಯ ಗಾಯಕನ ಉದಯ
ಆಗಲಿ ನಿನ್ನ ಹಾಡುಗಳೆಲ್ಲ ಜನಪ್ರಿಯ ॥

ಸೇರಿದೆ ವೆಂಕಟ್ ನೀನು
ಸೋತುಗೆದ್ದವರ ಸಾಲಿಗೆ
ಗೆದ್ದು ಸಾಗು ನೀನು
ಕೊನೆಯವರೆಗೆ ॥

ಮುಂದೆಂದೂ ಖಿನ್ನತೆಗೆ ಒಳಗಾಗಬೇಡ
ಇದು ನಿನ್ನ ಲಕ್ಷಾಂತರ ಅಭಿಮಾನಿಗಳ ವಿನಂತಿ
ಜೀವನವನ್ನು ಸಕಾರಾತ್ಮಕವಾಗಿ ಸ್ವೀಕರಿಸು
ಜನಸಾಮಾನ್ಯರ ಕಣ್ಮಣಿಯಾಗಿ ಬಾಳು ॥

# 56. ಪ್ರಿಯತಮ

ಬರಿದಾದ ಬಾಳಲ್ಲಿ ಬೆಳಕಾಗಿ ನೀ ಬಂದೆ
ಪ್ರೀತಿ ಪ್ರೇಮದಾಗಸದಲ್ಲಿ ತೇಲಾಡಿಸಿದೆ
ಬಾಳಿಗೊಂದರ್ಥವ ನೀತಂದೆ
ಕಂಡುಕೊಂಡೆನದರಲ್ಲಿ ಪ್ರೀತಿಯ ಸಾರ್ಥಕತೆ ॥

ಅರಗಳಿಗೆ ಬಾಳಲ್ಲಿ ಕಾಣದಿರೆ ನಿನ್ನ
ತುಡಿವುದೆನ್ನಮನ ನೆನೆನೆನೆದು ನಿನ್ನ
ನೀನಾರೋ ನಾನಾರೋ ಅರಿಯುವ ಮುನ್ನ
ಒಂದಾದಮೇಲೆ ಬಿಟ್ಟಿರಲಾರೆವು ಚೆನ್ನ ॥

ಪ್ರೀತಿಯ ಫಲವಾಗಿ ಪಡೆದು ಕಂದನ
ಅದರ ನಲಿದಾಟದಲಿ ಸಾರ್ಥಕವು ಹೆಣ್ತನ
ನನ್ನದೇನಿಲ್ಲ ನಿನ್ನದೇನಿಲ್ಲ
ಕೊಟ್ಟು ಪಡೆದೆವು ಪ್ರೀತಿಸಾಗರವ ॥

ಸರಸವಿರಸವೂ ಉಂಟೆಮ್ಮ ಜೀವನದಿ
ಆದರೂ ಪ್ರೀತಿಗೇ ಮೊದಲರ್ಥ ಇರುವುದೀ ಬಾಳಿನಲಿ
ಬೇವುಬೆಲ್ಲವಿದ್ದರೇ ಜೀವನಕೆ ಅರ್ಥ
ತ್ಯಾಗಪ್ರೀತಿ ಇಲ್ಲದಿರೆ ಜೀವನವೇ ವ್ಯರ್ಥ ॥

ಸಾಗುತಿರೆ ಹೀಗೆ ಬಾಳಪಯಣ
ಮುಳುಗಬೇಕು ಜೊತೆಯಲ್ಲೇ
ಜೊತೆಗೂಡಿದ ಜೀವನ
ಅಗಲಿಕೆ ಎನ್ನುವುದ ಸಹಿಸದೀ ಜೀವನ ॥

## 57. 'ಮಾನವತೆ'ಯ ದಾನವತೆ:

ಎತ್ತ ಸಾಗುತಿದೆ ಮನುಜಕುಲ
ನೀಡುತಿದೆ ಕ್ರೌರ್ಯರಸಕೆ ಪ್ರಾಶಸ್ತ್ಯ ।
ಎಲ್ಲೆಲ್ಲಿ ನೋಡಿದರು ಕೊಲೆ, ಸುಲಿಗೆ,
ಅತ್ಯಾಚಾರ, ಅನಾಚಾರ, ಹಿಂಸೆ ॥

ಪತ್ರಿಕೆಗಳು, ಮಾಧ್ಯಮಗಳು
ನೀಡುತಿವೆ ಪ್ರಸಾರದ ಅಧಿಕ ಸಮಯವ ।
ನೀಡುತಿಹರು ಮನರಂಜನೆಯ ಹೆಸರಿನಲ್ಲಿ
ಇಂತಹ ಸುದ್ಧಿಗಳ ಪ್ರಸಾರವ ॥

ಎಲ್ಲಿ ಹೋಯಿತು ಕರುಣೆ, ಪ್ರೇಮ
ಸೀಮಿತವಾಯಿತೆ ಪುರಾಣ, ಪುಣ್ಯಕಥೆಗಳಿಗೆ ।
ಬದಲಿಗೆ ಪ್ರಜ್ವಲಿಸುತಿದೆ ಕಾಠಿಣ್ಯತೆ,
ನೋಡಿ ಸುಖಿಸುತಿಹರು 'ಮನುಜರು' ॥

ಆದರೂ ಭೀಕರ ಅಪಘಾತ ತಮ್ಮೆದುರಿನಲ್ಲೇ
ಧಾವಿಸರು ಸಹಾಯ ನೀಡುವ ಕಾಯಕಕೆ ।
ಹೊರತೆಗೆಯುವರು ತಮ್ಮ ಮೊಬೈಲುಗಳ,
ತೆಗೆಯಲು ದೃಶ್ಯದ ವಿಡಿಯೋಗಳ ॥

## 58. ಹರಿಹರಕಥೆಯೋ ಸಿನಿಕತೆಯೋ

ಹರಿಯಾದರೇನು, ಹರನಾದರೇನು,
ಬಕುತರಿಗೆ ಎಲ್ಲ ದೈವವೂ ಒಂದೇ
ಬಕುತರಿಗಿರುವ ಭಕುತಿ ಪೂಜಾರಿಗಿರುವುದಿಲ್ಲ ॥

ಬ ಕುತ ತನ್ನ ದೈವವ ಹುಡುಕುತ ಹೋಗುವನು ನೂರಾರು ಮೈಲುಗಳು,
ಪೂಜಾರಿ ಮುಳುಗಿರುವನು ತನ್ನ ಕಾಯಕದಿ,
ಅದುವೇ ಧನಮಾಡುವ ಕಾಯಕದಿ ॥

ಮೊದಮೊದಲು ಆರತಿತಟ್ಟೆಕಾಸಿಗೆ ಸೀಮಿತವಾದ ಕೈಗಳು
ತೂರುತಿವೆ ಹುಂಡಿಯೊಳಗೆ ಅವೇ ಕೈಗಳು,
ದೇವನಿಗೆ ನೀವು ನೀಡಿದ ಕಾಣಿಗೆ ಆಗುತಿವೆ ಅನ್ಯರ ಪಾಲು ॥

ಬಕುತಿಯೆಂಬುದು ವೈಯುಕ್ತಿಕ ಎನ್ನುವವರು ಹಲವರು,
ಆದರೆ ಅದ ಪ್ರದರ್ಶನದ ವಸ್ತುವಾಗಿಸಿದವರು ಹಲವರು
ಕ್ಯಾಮರಾ ಕಂಡರಂತೂ ಅತಿಯಾಗುವುದು ಅವರ ಬಕುತಿ॥

ಹಿಂದೆಲ್ಲ ದೇಗುಲಗಳಲ್ಲಿರುತ್ತಿದ್ದುದು ಧರ್ಮದರ್ಶನ ಮಾತ್ರ,
ಆದರೆ ಇಂದು ಅಲ್ಲಿಯೂ ಆಗಿದೆ ಎರಡು ರೀತಿಯ ದರ್ಶನ,
ಧನಿಕರಿಗೆ ಒಂದು ದರ್ಶನ, ಬಡವರಿಗೆ ಧರ್ಮದರ್ಶನ ॥

ಎಲ್ಲಿ ಸಂಪತ್ತು ಸಂಗ್ರಹವಾಗುವುದೋ ಅಲ್ಲಿ ಹುಟ್ಟುತ್ತದೆ ದುರಾಸೆ,
ಹಂಡೆಯ ಹಾಲಲ್ಲಿ ಒಂದು ತೊಟ್ಟು ನೀರು ಹಾಕುವವರ ಸಂಖ್ಯೆಯಂತೆಯೇ
ಹೆಚ್ಚಾಗುತ್ತಿದೆ, ದೇವರ ಆಭರಣ, ಸಂಪತ್ತಿನಲ್ಲಿ ಪಾಲು ಕದಿಯುವವರ ಸಂಖ್ಯೆ ॥

ಮೊದಲೆಲ್ಲ ನಡೆದೇ ಹೋಗಬೇಕಿತ್ತು ಇಷ್ಟ ದೈವವ ಕಾಣಲು,
ಕಾಡುಮೇಡುಗಳ ನಡುವೆ, ಬೆಟ್ಟಗುಡ್ಡಗಳ ಮೇಲಕ್ಕೆ
ಮಡಿಯಲ್ಲಿ, ಬರಿಗಾಲಲ್ಲಿ ಕಲ್ಲುಮುಳ್ಳುಗಳನ್ನೂ ಲೆಕ್ಕಿಸದೆ॥

ಇಂದು ಹೋಗುವವರು ಕಾರಿನಲ್ಲೋ, ವಿಮಾನದಲ್ಲೋ
ಇಳಿಯುವವರು ದೇವರ ಗರ್ಭಗುಡಿಯ ಮಗ್ಗುಲಲ್ಲೇ
ಅವರಿಗೆಂದೇ ಇರುವುದು ವಿಶೇಷ ದರುಶನ ॥

ಬಡವಬಲ್ಲಿದರ ದೇವರಿಂದು ಆಗಿರುವರು
ಶ್ರೀಮಂತರ ದೇವರು, ರಾಜಕಾರಣಿಗಳ ದೇವರು
ನಿರಾಳವಾಗಿ ದರ್ಶನವೂ ಇಲ್ಲ, ಕಾಸಿಲ್ಲದಿರೆ ತೀರ್ಥವೂ ಇಲ್ಲ ॥

ಎನ್ನುವರು ದೇವರು ಎಲ್ಲೆಲ್ಲಿಯೂ ಇರುವನೆಂದು,
ಪ್ರತಿ ಜೀವಿಯಲ್ಲಿಯೂ ನೆಲೆಸಿಹನೆಂದು
ನೆನೆಯಬಾರದೇ ಅವನ ನಿಮ್ಮ ಮನದಲ್ಲೇ ಇಂದು ॥

ಎಲ್ಲಿಹೋಯಿತು ಸಹಜ ಸೌಂದರ್ಯದ ಮೂರ್ತಿ.
ಮುಚ್ಚಿಹೋಗಿವೆ ಚಿನ್ನ ಬೆಳ್ಳಿ ಲೋಹದಲ್ಲಿ ಆ ಮೂರ್ತಿ,
ದೂರಾಗುತ್ತಿದೆ ಸಾಮಾನ್ಯ ಜನರಿಂದಲೇ ಮೂರ್ತಿ ॥

ಧಿಕ್ಕರಿಸಿ ಜಾತಿಭೇದ, ಲಿಂಗಬೇಧ ಮಾಡುವ ದೇಗುಲಗಳ,
ಹೋಗದಿರಿ ಮಹಿಳೆಯರೆ ಅಂತಹ ದೇಗುಲಗಳಿಗೆ,
ದಿಕ್ಕಾರವಿರಲಿ ಅಂತ ಕಟ್ಟಳೆಗಳ ಮಾಡುವ ಅಧಿಕಾರಿಗಳಿಗೆ ॥

# 59. ದಾಸೋಹದ ಆನಂದ:

ಮೈಸೂರಿನಲ್ಲಿ ಆದುದೇ ದಾಸೋಹದ ಆರಂಭ
ಹರಡಿತು ಎಲ್ಲೆಡೆ ಸಾಹಿತ್ಯದ ಆನಂದ
ಆಯಿತು ಹಿರಿಕಿರಿ ಕವಿಗಳಿಗೆ ಆನಂದ
ಸಾಹಿತ್ಯಾಸಕ್ತರಿಗೂ ಆಯಿತು ಆನಂದ ॥

ಆಯಿತೆನಗೆ ಆನಂದ,
ದಾಸೋಹದ ಆನಂದ
ನಿರಾಳವಾದರು ಆನಂದ
ತಾ ನೆಟ್ಟ ಸಸಿ ಚಿಗುರುತ್ತಿರುವ ಆನಂದ ॥

ಬೆಂಗಳೂರಿನಿಂದ ಆಮದಾದ ದಾಸೋಹ
ಟಿಸಿಲೊಡೆಯಿತು ನಮ್ಮೂರಿನಲಿ,
ಅದ ಕಾಪಾಡವುದು ನಮ್ಮೆಲ್ಲರ ಹೊಣೆ
ಕಣ್ಮುಚ್ಚಿದರೂ ಅದಕೆ ಆಗುವೆವು ನಾವೇ ಹೊಣೆ ॥

ಪರಿಚಿತರಾದರು ನಗರದ ಕಲಿಗಳು,
ಕನ್ನಡ ಸಾಹಿತ್ಯದ ಕಲಿಗಳು
ಅವರದೇ ಇತಿಹಾಸ ನಿರ್ಮಿಸಿದವರು,
ಆದರೂ ತುಂಬ ಹೃದಯವಂತರು ॥

ತಿಂಗಳಿಗೊಮ್ಮೆ ಸಾಹಿತಿಗಳ, ಶ್ರೋತೃಗಳ ಸಮಾಗಮ,
ಒಮ್ಮೊಮ್ಮೆ ಒಂದೊಂದು ಕಡೆ ಸಂಗಮ,
ನೀಡುವರು ಹಸಿದ ಮನಗಳಿಗೆ ಆಹಾರ
ಜೊತೆಗೆ ಹಸಿದ ಹೊಟ್ಟೆಗಳಿಗೂ ಆಹಾರ ॥

ನಾನಂತೂ ಚಿರಋಣಿ ದಾಸೋಹಕ್ಕೆ
ಬಡಿದೆಬ್ಬಿಸಿತು ನನ್ನಲ್ಲಿನ ಕವಿ ಹೃದಯಕ್ಕೆ,
ಸಲ್ಲಬೇಕು ನನ್ನ ನಮನ ಕಾರಣಪುರುಷರಿಗೆ,
ನೂರರ ಗಡಿದಾಟಿತು ನನ್ನ ಕವನ ಇತ್ತೀಚೆಗೆ ॥

## 60. ಡಬ್ಬಲ್ ಹೆಲ್ಮೆಟ್ ಫಜೀತಿ:

ಬಂತು ನೋಡಿ ಹಿಂಬದಿಸವಾರರಿಗೆ ಕಡ್ಡಾಯ ಹೆಲ್ಮೆಟ್,
ಇಡಬೇಕಾಗಿ ಬಂತು ಸವಾರರು ಎರಡೆರಡು ಹೆಲ್ಮೆಟ್
ಇಟ್ಟುಕೊಂಡಿದ್ದರೂ ಎರಡೆರಡು ಹೆಲ್ಮೆಟ್,
ನಿರಾಕರಿಸಿದರೆ ಹೆಂಡಂದಿರು, ಧರಿಸಲು ಹೆಲ್ಮೆಟ್
ಪೀಕಬೇಕು ಗಂಡಂದಿರು, ಅವರಿಗಾಗೇ ಪ್ರತ್ಯೇಕ ಆಟೋ ರೇಟ್॥

## 61. ಸೋಲಿಗೆ ಸಾಂತ್ವನ:

ತಿಳಿದುಕೊಳ್ಳಿ ಮಿತ್ರರೇ ಈ ಆಟ,
ಚುನಾವಣೆಯೂ ಒಂದು ಆಟ
ಸ್ಪರ್ಧಿಗಳ ನಡುವೆ ನಡೆಯುವ ಮೇಲಾಟ ॥

ಇತರ ಕ್ರೀಡೆಗಳಂತೆಯೇ ಈ ಆಟ,
ಇತರರಿಗೆ ಆದರೆ ಸೋಲಿನ ಓಟ,
ಒಬ್ಬರಿಗೆ ಮಾತ್ರ ಗೆಲುವಿನ ನಾಗಾಲೋಟ, ॥

ಇದಕಾಗಿ ಪಡದಿರಿ ನಿರಂತರ ಸಂಕಟ,
ತಿಳಿಯಿರಿ ಸೋಲೇ ಗೆಲುವಿನ ಪಾಠ
ಕೇಳಿಲ್ಲವೇ ಮರಳಿ ಯತ್ನವ ಮಾಡೆನ್ನುವ ಪಾಠ ॥

## 62. ಜೈ ಜವಾನ್, ಜೈ ಕಿಸಾನ್:

ಜೈ ಜವಾನ್, ಜೈ ಕಿಸಾನ್
ಇಬ್ಬರೂ ಆಗಿರುವರು ಮಹಾನ್
ಇದ ಅಂದೇ ಕಂಡುಕೊಂಡಿದ್ದರು ನಮ್ಮ ಪ್ರಧಾನಿ
ಅಂತೆಯೇ ಮಾಡಿದರು ಇದ ಒಂದು ಘೋಷವಾಣಿ ॥

ಇಂದೇನು ಆಗಿದೆ ನಮ್ಮ ಜನನಾಯಕರುಗಳಿಗೆ
ಕವಡೆ ಕಿಮ್ಮತ್ತು ಕೊಡುತ್ತಿಲ್ಲ ಅವರ ಜೀವಗಳಿಗೆ
ಸಾಲು ಸಾಲಾಗಿ ಸಾವಿಗೀಡಾಗುತಿಹರು ಈರ್ವರೂ
ಕನಿಷ್ಟ ಗೌರವಕೂಡ ನೀಡುತ್ತಿಲ್ಲ ಅವರ ಸಾವಿಗೆ ॥

ವರ್ಷದ ಆರು ತಿಂಗಳು ಪಟ್ಟರೆ ಪಡಿಪಾಟಲು
ಕೃಪೆತೋರಿದರೆ ಪ್ರಕೃತಿ ಇವರ ಪಾಲಿಗೂ
ಕೈಗೆ ಬರುವುದು ತನ್ನವಶ್ಯಕತೆಗೆ ಮಿಕ್ಕಿ ಫಸಲು
ಆದರೂ ದಳ್ಳಾಳಿಗಳ ಕಾಟದಿಂದ ಆಗುವುದು ಲಾಸು ॥

ಅಂತೆಯೇ ನಾವಿಂದು ಬೆಚ್ಚಗೆ ಸುರಕ್ಷಿತವಾಗಿರಲು
ಕಾರಣಕರ್ತರೇ ನಮ್ಮ ಗಡಿಕಾಯುವ ಸೈನಿಕರು
ಶೂನ್ಯಕ್ಕಿಂತ ಐವತ್ತು ಕಡಿಮೆ ಡಿಗ್ರಿ ಉಷ್ಣಾಂಶದಲ್ಲಿ
ಕಾಯುತ್ತಿರುವವರಿಗೆ ಸಲ್ಲಲಿ ನಿಮ್ಮದೊಂದು ಸಲಾಂ ॥

ಸುರಿಸುತಿಹರು ಮೊಸಳೆ ಕಣ್ಣೀರು
ನಿಂತಿಲ್ಲ ಸತ್ತವರ ಸಂಸಾರಿಗರ ಗೋಳು
ಹಾಕಿದರೆ ದೊಡ್ಡ ದೊಡ್ಡ ಹಾರ
ತೀರುವುದೇ ಅವರ ಮನೆಯವರ ಭಾರ ॥

ನಿಲ್ಲಿಸಿ ಇನ್ನಾದರೂ ಬೂಟಾಟಿಕೆ
ತೋರಿರಿ ನಿಜವಾದ ನಿಮ್ಮ ಹೃದಯವಂತಿಕೆ
ಒದಗಿಸಿ ಅವರ ಬಾಳಿಗೆ ನಿಮ್ಮ ಸ್ಪಂದನೆ
ನೆರವುನೀಡಿರಿ ನೆಮ್ಮದಿಯ ಜೀವನಕೆ ॥

## 63. ಅಪಘಾತ ಕಲಿಸಿದ ಪಾಠ:

ನೋಡಿದಿರಾ ಗೆಳೆಯರೇ ಆ ದೃಶ್ಯವಾ
ರಸ್ತೆ ಅಪಘಾತದಲ್ಲಿ ಎರಡು ಭಾಗವಾದ ದೇಹವಾ
ನೆರವಿಗಾಗಿ ಅಂಗಲಾಚುತ್ತಿದ್ದ ಯುವಕನ ಕೂಗಾ ॥

ನೆರೆದಿತ್ತು ಜನಸಮೂಹ ಸುತ್ತಲೂ
ಕ್ಲಿಕ್ಕಿಸುತ್ತಿದ್ದವು ಅವರ ಕೈನ ಮೊಬೈಲುಗಳು
ಧಾವಿಸಲಿಲ್ಲ ಅವನ ನೆರವಿಗೆ ಯಾರ ಕೈಗಳೂ ॥

ಬರಬಾರದು ಈ ದಯನೀಯ ಪರಿಸ್ಥಿತಿ ಯಾರಿಗೂ
ತುಂಬಿರಬೇಕು ಮಾನವೀಯತೆ ಎಲ್ಲರ ಮನದಲ್ಲೂ
ಸಹಾಯಮಾಡುವವರಿಗೆ ಇರಬೇಕು ಪೋಲೀಸರ ಬೆಂಬಲವೂ ॥

ಸತ್ತಿದ್ದರೂ ಮಾನವೀಯತೆ ನೋಡುಗರ ಮನದಲ್ಲಿ
ಕಂಡಿತ್ತು ನಿಜವಾದ ಮಾನವತೆ ಆ ಯುವಕನಲ್ಲಿ
ಸಾವಿನ ಸನಿಹ ಧಾವಿಸುತ್ತಿದ್ದ ದೇಹದಲ್ಲಿ ॥

ಸಾಯುವಮುನ್ನ ಆಂಬ್ಯುಲೆನ್ಸಿನಲ್ಲಿ ಸಾಗುವಾಗ
ಸಲ್ಲಿಸಿದ ನರ್ಸಮ್ಮನಿಗೆ ತನ್ನ ಅಂತಿಮ ಕೋರಿಕೆಯ
ಸತ್ತರೆ ಕಿತ್ತುನೀಡಿ ಇಲ್ಲದವರಿಗೆ ತನ್ನ ನಯನವಾ॥

ಮೆರೆದ ಆ ಯುವಕ ಸಾವಿನಲ್ಲೂ ಸಾರ್ಥಕತೆ
ತನ್ನ ಅಂಗದಾನದ ಮೂಲಕ ಮೆರೆದ ಮಾನವತೆ
ಆಗಲೇ ಮನುಷ್ಯ ಜೀವನದ ಸಾರ್ಥಕತೆ ॥

# 64. ಮಧುರಾಬಾಯಿ

(ಬೆಳಕು ವಾತ್ಸಲ್ಯಧಾಮದಲ್ಲಿ ಎರಡು ವರ್ಷಗಳ ಆಶ್ರಯ ಪಡೆದು
6-12-2015 ರಂದು ತೀರಿಕೊಂಡ ಮಧುರಾಬಾಯಿಗೆ
ಶ್ರದ್ಧಾಂಜಲಿರೂಪದ ಕವನ)

ನೋಡಿದಾಕ್ಷಣ ಉಕ್ಕುವುದು ಗೌರವಭಾವ
ಅಪ್ಪಟ ಸಂಪ್ರದಾಯಸ್ಥ ಉಡುಗೆ ತೊಟ್ಟಾಕೆ
ಯಾರೋ ತಂದು ಬಿಟ್ಟಾಕೆ,
ಕಣ್ಣು ಮಂಜಾಗಿ, ಕಿವಿ ಮಂದವಾಗಿ
ತನ್ನಷ್ಟಕ್ಕೆ ತಾನೇ ವಟವಟ ಎನ್ನುತ್ತಿದ್ದಾಕೆ॥

ಏಕಾದಶೀ ಉಪವಾಸ, ದ್ವಾದಶೀ ಪಾರಾಯಣ ಎನ್ನುತ್ತಿದ್ದಾಕೆ
ವೃದ್ಧಾಶ್ರಮ ಸೇರಿದಮೇಲೆ ಒಂದೊಂದೇ ಬಿಟ್ಟಾಕೆ
ಕೆಟ್ಟದನ್ನು ನೋಡಲಾರದೇ, ಕೇಳಲಾರದೇ
ಭಗವಂತನ ನಾಮಸ್ಮರಣೆಯಲ್ಲಿದ್ದಾಕೆ
ಇತರರ ಜೊತೆ ಹೆಚ್ಚು ಬೆರೆಯದಾಕೆ॥

ಕಣ್ಣಿನ ಆಪರೇಷನ್‌ನಿಂದ
ಕಣ್ಣು ಕಾಣಿಸತೊಡಗಿ,
ಕಿವಿಯೂ ಕೇಳಿಸತೊಡಗಿ
ಗೊಂದಲದಲ್ಲಿ ಮುಳುಗಿದಾಕೆ
ಆದರೂ ತನ್ನಷ್ಟಕ್ಕೆ ತಾನಿದ್ದಾಕೆ॥

ಈಚೆಗಷ್ಟೆ ಮನದಲ್ಲಿ ದುಗುಡ ತುಂಬಿ
ಅದು ಮನೋರೋಗವಾಗಿ ತಿರುಗಿ
ಜೀವಹರಣದ ನಿರ್ಧಾರ ತೆಗೆದುಕೊಂಡಂತೆ
ಅನ್ನ ನೀರು ತ್ಯಜಿಸಿ ಸೈಲೆಂಟಾದಾಕೆ
ಕೆಲವೇ ದಿನಗಳಲ್ಲಿ ಇಹಲೋಕ ಬಿಟ್ಟಾಕೆ॥

ಎಲ್ಲ ಇದ್ದೂ ಯಾರೂ ಇಲ್ಲವಾಗಿ
ನೆಂಟರಿಷ್ಟರು ದೂರಾಗಿ
ಅನ್ಯ ಜನರೊಡನೆ ಬಾಳಬೇಕಾಗಿ
ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ
ಎರಡು ವರ್ಷ ನಮ್ಮೊಡನಿದ್ದಾಕೆ॥

ಜವರಾಯನ ಕರೆ ಬಂದು
ನಮ್ಮಿಂದ ದೂರನಿಂತು
ನಾವುಗಳೇ ಮುಂದೆನಿಂತು
ಮಾಡಬೇಕಾಗಿ ಬಂತು
ನಿಮ್ಮ ಅಂತ್ಯಸಂಸ್ಕಾರ॥

ಮಾತುಮಾತಿಗೆ ನಮಗೆ ಕೃತಜ್ಞತೆ
ಸಲ್ಲಿಸುತ್ತಿದ್ದಿರಿ ನೀವು ನಿಮ್ಮ ಸೇವೆಮಾಡುವ
ಭಾಗ್ಯ ನಮಗಿತ್ತು ಕಡೆವರೆಗೆ
ಅದಕಾಗಿ ನಾವು ಋಣಿಗಳು ನಿಮಗೆ
ಇದೇ ನಮ್ಮ ಶ್ರದ್ಧಾಂಜಲಿ ತಮಗೆ॥

# 65. ಗೆಳೆಯ ತುಂಗರಿಗೊಂದು ಶ್ರದ್ಧಾಂಜಲಿ

ಸುಮಾರು 45 ವರ್ಷಗಳ ಗೆಳೆತನ
ಅಂತ್ಯಗೊಂಡಿತು ಇಂದಿಗೆ ಗೆಳೆಯಾ
ಬಲು ಭಾರವಾದ ಮನದಿಂದ
ಕೋರುತಿಹೆನು ನಿನಗೆ ವಿದಾಯ
ಅಂದು ತ್ರಿಮೂರ್ತಿಗಳೆನಿಸಿಕೊಂಡಿದ್ದ ನಾವು
ನಿನ್ನಗಲಿಕೆಯಿಂದ ಆದೆವು ಇಂದು ದ್ವಿಮೂರ್ತಿಗಳು ॥

ಹೋಗಿಬರುವೆಯ ಗೆಳೆಯಾ
ನಿನಗಿದೋ ನನ್ನ ಅಂತಿಮ ನಮನ
ಕಾಲನಕರೆ ಬಂದಾಗ ಬರಲಾರೆನೆಂದು
ನಿರಾಕರಿಸಲು ನಾವೇನು ದೇವಮಾನವರಲ್ಲ
ದೊಡ್ಡವರಾದರೇನು, ಚಿಕ್ಕವರಾದರೇನು
ಎಲ್ಲರೂ ಸಮಾನರೇ ಆ ಕಾಲನೆದುರು ॥

ನೀ ಇಂದು ನಾ ನಾಳೆ
ನೀಕೊಂಚ ಮುಂದು, ನಾಕೊಂಚ ಹಿಂದು,
ಹೋಗಲೇಬೇಕು ಎಲ್ಲರೂ
ಈ ಜಗವ ಬಿಟ್ಟು
ಕೇಳಿಲ್ಲವೇ ಗೆಳೆಯಾ ಇಲ್ಲಿರುವುದು ಸುಮ್ಮನೆ
ಅಲ್ಲಿರುವುದು ಅಲ್ಲಲ್ಲ ಅಲ್ಲೇ ಇರುವುದು ನಮ್ಮನೆ ॥

## 66. ಯುಗಾದಿಗೆ ಸ್ವಾಗತ

ನಮ್ಮೆಲ್ಲರಿಗೆ ನಿಜವಾದ ಹೊಸವರುಷ
ಎಂದರೆ ಅದು ಯುಗಾದಿ।
ತೆಗೆಯದಿರಿ ಆ ದಿನ
ಯಾವುದೇ ತಗಾದೆ ॥

ಸಿಗುವುದು ಮನೆಯವರಿಗೆಲ್ಲ ತಿನ್ನಲು ಹೋಳಿಗೆ, ಪುಳಿಯೋಗರೆ
ಹೆಂಗಳೆಯರಿಗೆ ಹೊಸ ಸೀರೆ, ಒಡವೆಗಳ ಉಡುಗೊರೆ
ಗಂಡಸರಿಗೆ ಜೂಜಾಟದ ಗಳಿಕೆ ಕಳಿಕೆಯಕೊಡುಗೆ
ಮಧ್ಯದಲ್ಲಿ ಭರ್ಜರಿ ಮಾರಾಟ ವ್ಯಾಪಾರಿಗಳಿಗೆ ॥

ಸಿಗುವುದು ಭರಪೂರ ಅವಕಾಶ ಭವಿಷ್ಯಕಾರರಿಗೆ
ಟೀವೀಚಾನಲ್ಲುಗಳು ಕೋರುವವು ಭವ್ಯ ಸ್ವಾಗತ ಅವರಿಗೆ
ಯುಗಪುರುಷನ ಕರೆತರುವರು ವಿಚಿತ್ರ ವೇಷಗಳಲಂದು
ನೀವೇರದಿರಿ ಯಾವುದೇ ವಾಹನವ ಅಂದು ॥

ಇದೆ ಜನರಲ್ಲಿ ನಂಬಿಕೆಯೊಂದು
ಉಗಾದಿಮಾರನೇದಿನ ಮಾಡಿದುದು
ವರ್ಷಪೂರ್ತಿ ನಡೆಯುವುದೆಂದು
ಅದಕಾಗಿ ಹೇಳುವರು ಜಗಳ ಆಡದಿರಿ ಅಂದು ॥

# 67. ಮುದುಡುತಿವೆ ಎಳೆಗಿಡಗಳು, ಕೊಳೆಯುತಿವೆ ಮುದಿಮರಗಳು:

ನಿತ್ಯ ನೋಡುತ್ತಿಲ್ಲವೇನು ವೃತ್ತಪತ್ರಿಕೆಗಳ, ಕೇಳುತ್ತಿಲ್ಲವೇನು ವಾರ್ತೆಗಳ
ಈಜಾಡಲು ಹೋದ ಯುವಕಯುವತಿಯರ ಸಾವು,
ರಸ್ತೆ ಅಪಘಾತಗಳಲ್ಲಿ ವ್ಹೀಲಿಂಗ್ ಮಾಡಲು ಹೋದ ಯುವಕರ ಸಾವು ॥

ಗಂಡನಿಂದ ಹೆಂಡತಿ ಕೊಲೆ, ಹೆಂಡತಿಯಿಂದ ಗಂಡನ ಸಾವಿಗೆ ಸುಪಾರಿ
ಫೇಲಾದುದಕ್ಕೆ, ಪ್ರೀತಿಸಿ ಕೈಕೊಟ್ಟುದುದಕ್ಕೆ ಅತ್ಮಹತ್ಯೆ, ಸೆಲ್ಫೀಸಾವು
ಒಟ್ಟಿನಲ್ಲಿ ಎಳೆಗಿಡಗಳ ಸಾವು ॥

ಎಂಬತ್ತಮೀರಿದ ಮೇಲಂತೆ ಮುದಿಯರ ಸಾವು
ಆಗುತ್ತಿವೆ ಸಾವು ಗೆಲ್ಲಲಿಕ್ಕೆ ಔಷಧಗಳ ಸಂಶೋಧನೆ,
ಒಟ್ಟಿನಲ್ಲಿ ಮುದಿಯರಿಗೆ ಮೃತ್ಯುಂಜಯರಾಗುವ ಬಯಕೆ ॥

ದೇಶದ ತುಂಬ ಎಲ್ಲಿನೋಡಿದರಲ್ಲಿ ಯಯಾತಿಗಳು
ಕೈಕಾಲುಗಳಲ್ಲಿ ಶಕ್ತಿಯಿಲ್ಲದಿದ್ದರೂ ಜೀನ್ಸ್ ಹಾಕಿದ ಶೋಕೀವಾಲರು
ನೆಟ್ಟಗೆ ನಡೆಯಲಾರದೇ ಕಾಲನ ಕರೆಗೆ ಕಾಯುತ್ತಿರುವವರು ॥

ಹೀಗೇ ಆದರೆ ದೇಶದ ಗತಿಯೇನು
ಸರ್ಕಾರವೇ ಮನಗೆ ಕಳುಹಿಸಿರುವ ಮುದಿಯರು ಒಂದೆಡೆ
ಅಕಾಲ ಮೃತ್ಯುವಿಗೆ ತುತ್ತಾಗುತ್ತಿರುವ ಯುವಕರು ಮತ್ತೊಂದೆಡೆ॥

ದೇಹ ಮುಪ್ಪಾದಂತೆ, ಮಿದುಳು ಮಂಕಾಗುವುದು
ಅಂಗಗಳಮೇಲಿನ ನಿಯಂತ್ರಣ ಇಲ್ಲವಾಗುವುದು
ಆದರೂ ಆಸ್ತಿಮಾಡುವ ಆಸೆ ತಪ್ಪದು॥

ಮಕ್ಕಳ, ಮೊಮ್ಮೊಕ್ಕಳ ಸಾವು ಕಂಡಾಗ
ಆ ದೇವನ ಮೇಲೆ ಬರುವುದು ಸಿಟ್ಟು
ತೆರಳಿ ವಾನಪ್ರಸ್ಥಕ್ಕೆ ದೂಷಿಸುವುದ ಬಿಟ್ಟು ॥

# 68. ದಾಹ:

ಕೊನೆಯಿಲ್ಲ ಮಾನವನ ದಾಹಕ್ಕೆ
ಮಿತಿಯಿಲ್ಲದ ಭೂ ದಾಹಕ್ಕೆ ।
ಬದುಕಿರುವವರ ನೆಲವಾಗಲೀ,
ಸತ್ತವರ ಸ್ವತ್ತಾಗಲೀ ॥

ನಮ್ಮದಾಗಲೆಂಬ ದಾಹ
ಈ ಬಕಾಸುರರ ಬಸಿರಿಗೆ ।
ಒಬ್ಬೊಬ್ಬರದೂ ಇದೆ ನೂರಾರು ಎಕರೆ
ಮಕ್ಕಳು ಮೊಮ್ಮೊಕ್ಕಳ ಹೆಸರಿಗೆ॥

ತಿಳಿದಿಲ್ಲವೇ ಈ ಅಧಮರಿಗೆ
ಹೊಂದಿದ್ದರೂ ನೂರಾರು ಎಕರೆ ಜಮೀನು ।
ಹೂಳುವರು ಯಾ ಸುಡುವರು
ಮೂರಡಿ ಆರಡಿ ಜಾಗದಲಿ ॥

ಜೀವನಪಯಣ ಮುಗಿಸಿ ಹೋಗುವಾಗ
ತನ್ನೆಡೆಗೆ ಬರುವುದಿಲ್ಲ ಜೊತೆಯಲ್ಲಿದ್ದವರು ।
ಉಟ್ಟ ಬಟ್ಟೆಯನ್ನೂ ಕಿತ್ತೆಸೆಯುವರು
ನಿನಗೇಕೆ ಬಂತೋ ಈ ದುರಾಸೆ ॥

ರಾಜರಿಗೆ ರಾಜ್ಯ ವಿಸ್ತರಿಸುವಾಸೆ,
ರಾಜಕಾರಣಿಗಳಿಗೆ ಆಸ್ತಿ ಹೆಚ್ಚಿಸುವಾಸೆ ।
ದೇಶಗಳಿಗೆ ಗಡಿ ಆಕ್ರಮಿಸುವಾಸೆ
ನೆಲಬಿಟ್ಟು ಮುಗಿಲಿಗೆ ನೆಗೆಯುವಾಸೆ ॥

ಗಡಿ ಕಾಯಲಿಕ್ಕೆ ಬೇಕು ಸೈನಿಕರು
ನಮ್ಮ ನಿಮ್ಮ ಆಸ್ತಿ ಕಾಯಲು ಯಾರು ಇರುವರು ।
ತಿಳಿ ಮೂಢ ಉಂಡಿದ್ದು ನಿನಗೆ
ಬಚ್ಚಿಟ್ಟಿದ್ದು ಪರರಿಗೆ ॥

## 69. ಜೀವಿತಾನಂದ:

ಏನ ಹೇಳಲಿ ನನ್ನ ತಳಮಳ,
ನಿನ್ನ ಕಾಣದ ಆ ಕೆಲವು ದಿನ,
ಕಂಡವು ಕ್ಷಣಗಳು ದಿನಗಳಂತೆ
ದಿನಗಳು ತಿಂಗಳುಗಳಂತೆ ॥

ಬಿಟ್ಟುಹೋಗದಿರು ಮತ್ತೆಂದೂ,
ತಾಳಲಾರೆನು ನಿನ್ನ ವಿರಹ ನಾನೆಂದೂ,
ಅನಿವಾರ್ಯ ಎಂದಾದರೆ
ಕರೆದುಕೊಂಡು ಹೋಗು ನನ್ನನ್ನೂ ॥

ಇರಬೇಕು ನಾವೆಂದೂ ಒಟ್ಟಿನಲಿ
ಸುತ್ತಾಡಬೇಕು ಗಿರಿಕಾನನದಲಿ
ಹಾರಾಡಬೇಕು ಹಕ್ಕಿಗಳಂದದಲಿ
ಅಡೆತಡೆಯಿಲ್ಲದೆ ಬಾನಂಗಳದಲಿ ॥

ಈಜಾಡಬೇಕು ನೀರಿನಲಿ
ಬಣ್ಣಬಣ್ಣದ ಮೀನುಗಳಂದದಲಿ
ಹೀರಬೇಕು ಪ್ರೀತಿಪ್ರೇಮರಸವ
ಪೂರ್ಣವಾಗಿ ದುಂಬಿ ಜೇನುಗಳಂದದಲಿ ॥

ನಿನಗಾಗಿ ನಾನು ನನಗಾಗಿ ನೀನು
ಜಗದಲ್ಲಿ ಇಲ್ಲ ಯಾರೂ ಇದಕೆ ಸಾಟಿ,
ನಮ್ಮ ವಂಶದ ಕುಡಿ ಬಗೆಗಾದರೆ
ಆಗುವುದು ಅದು ನಮಗೆ ಆಸರೆ ॥

## 70. ಬರುತಿದೆ ಪ್ರೇಮಿಗಳ ದಿನ:

ಬರುತಿದೆ ಮತ್ತೆ ಪ್ರೇಮಿಗಳ ದಿನ
ನಾವು ಪ್ರೇಮಿಗಳೆಂದು ತೋರುವ ದಿನ ।
ಸೀಮಿತವೇ ಈ ಆಚರಣೆ ಒಂದೇ ದಿನ
ದ್ವೇಷಿಸುವೆವೆ ನಾವು ಉಳಿದ ದಿನ॥

ಬಂತೆಂದರೆ ಪ್ರೇಮಿಗಳ ದಿನ
ಪ್ರಾರಂಭ ಅದಕೆ ಪರವಿರೋಧ ।
ಎತ್ತುತ್ತಾರೆ ನೈತಿಕತೆಯ ದನಿ
ಹೊರಡುವರು ನಡೆಸಲು ನೈತಿಕ ದಾದಾಗಿರಿ ॥

ಕಾಣುವುದಿಲ್ಲವೇ ಪ್ರೇಮಿಗಳ
ವರ್ಷದ ಎಲ್ಲ ದಿನ ।
ಪಾರ್ಕು, ಪ್ರವಾಸಿ ತಾಣಗಳಲ್ಲಿ
ಪ್ರೇಮಕ್ಕೆಂದೇ ಬೇಕೇ ಪ್ರತ್ಯೇಕ ದಿನ ॥

## 71. ನಿಶೆ - ನಶೆ - ಉಷೆ:

ಇದ್ದನೊಬ್ಬ ಮುಗುದ
ಕೇಳಿದ್ದ ಇತರರು ಹೇಳಿದ್ದ
ಕುಡಿದರೆ ಮದಿರೆ
ಕೂಡಲೆ ಬರುವುದು ನಿದಿರೆ ॥

ತಂದನೊಂದು ಬಾಟಲ್
ಸುರಿದನೊಂದು ಲೋಟದೊಳ್
ಇಳಿಸಿದನದನು ಗಂಟಲೊಳ್
ಉರುಳಿದನು ಹಾಸಿಗೆಯೊಳ್ ॥

ಹಿಡಿದಿದ್ದನೊಂದು ಕೈಯಲ್ಲಿ ಸ್ವಿಚ್ಚು
ಆರಿಸಲೆಂದು ನಿದ್ರೆಬಂದಾಗ ಆ ಸ್ವಿಚ್ಚು
ಆವರಿಸಿದಳು ನಿದಿರೆ ಯಾವುದೋವೇಳೆ
ಕಣ್ತೆರೆದಾಗ ಆಗಿತ್ತು ಹಗಲು ಆ ವೇಳೆ ॥

ದೀಪವು ಹಾಗೆಯೇ ಉರಿಯುತ್ತಿತ್ತು
ಕೈ ಯಾವಾಗಲೋ ಜಾರಿಬಿದ್ದಿತ್ತು
ಕುಡಿದುದಕ್ಕೆ ಬಂದಿತೋ ನಿದ್ದೆ
ಕುಡಿಯದಿದ್ದರೂ ಬರುತಿತ್ತೋ ನಿದ್ದೆ
ಆಗಿಹುದು ಇಂದಿಗೂ ನಿಗೂಢ ॥

ಕುಡಿಯದಿರಿ ಭ್ರಮೆಯಲ್ಲಿ
ಹಾಗಾಗುವುದೆಂದು, ಹೀಗಾಗುವುದೆಂದು
ಕುಡಿಯುವುದರಿಂದ ಬದಲಾಗುವುದಿಲ್ಲ
ಭಾವನೆಗಳು ಮನಸ್ಥಿತಿಗಳು ॥

ಕುಡಿಯುವರೇನು ಸಾತ್ವಿಕರು
ಗೆಲ್ಲಬಹುದು ಲೋಕವನ್ನೇ
ಧೃಢಮನಸ್ಸಿನಿಂದ, ತಿಳಿಮನದಿಂದ
ಸ್ನೇಹಿತರ ನೈತಿಕನೆರವಿನಿಂದ ॥

ಅರಿಯಿರಿ ಗೆಳೆಯರೆ
ಬರದು ನಿದ್ರೆ ಕುಡಿಯುವುದರಿಂದ
ಅರಿಯೆವು ನಿದ್ರೆಬರುವ ಸಮಯವ
ಅರಿವಾಗುವುದೇ ಎಚ್ಚರಗೊಂಡಾಗ ॥

ಕೇಳಿಲ್ಲವೇ ಹಿರಿಯರ ಹೇಳಿಕೆ
ಚಿಂತೆಯಿಲ್ಲದವಗೆ ಸಂತೆಯಲ್ಲೂ ನಿದಿರೆ
ದಣಿದ ಮನಕೆ ಬರುವುದೀ ನಿದಿರೆ
ಕುಡಿಯದಿದ್ದರೂ ಮದಿರೆ ॥

# 72. ಭಯ - ನಿರ್ಭಯ ವಾತಾವರಣ

ಶುರುವಾಗಿದೆ ಇತ್ತೀಚೆಗೆ ಹೆದರಿಕೆ
ಎಲ್ಲೆಲ್ಲೂ ಭಯೋತ್ಪಾದಕರ ಬೆದರಿಕೆ
ಯಾರು ಎಲ್ಲಿ ಗುಂಡು ಹಾರಿಸುವರೋ
ಯಾರು ಎಲ್ಲಿ ಬಾಂಬು ಸಿಡಿಸುವರೋ
ಎನ್ನುವ ಹೆದರಿಕೆಯಲ್ಲಿಯೇ ಅಡಿಯಿಡುವರು
ಮನೆಯಿಂದ ಹೊರಗಡೆ ತೆರಳುವವರು ॥

ಮೊದಲೆಲ್ಲ ಇದ್ದರು ದೇಶದಲ್ಲಿ ನಕ್ಸಲರು
ನಂತರ ಹುಟ್ಟಿಕೊಂಡವರು ಎಲ್‌ಟಿಟಿಇ ಹೋರಾಟಗಾರರು
ಈಗಂತೂ ಐಸಿಸ್, ಲಷ್ಕರೇ ತೊಯ್ಯಬಾ, ಜೈಶೇ ಮಹಮದರು
ಬಹುತೇಕ ಉಗ್ರರು ಎಲ್ಲಾ ಒಂದೇ ಕೋಮಿನವರು
ಇವರ ದಾಳಿಗೆ ಬಲಿಯಾಗುವವರಲ್ಲಿ ಬಹುತೇಕರು
ಅಮಾಯಕರು, ಜನಸಾಮಾನ್ಯರು ॥

ದೇಶದೇಶಗಳ ನಡುವೆ ವೈಮನಸ್ಯ ಹೊಟ್ಟೆಕಿಚ್ಚು
ಬಿತ್ತುತ್ತಿರುವವರು ಈ ಉಗ್ರರು ಎದೆತುಂಬ ಕಿಚ್ಚು
ಹೊಡೆದುರುಳಿಸಲು ಇವರ ಬೇಕು ಸೈನಿಕರಿಗೆ ಕೆಚ್ಚು
ಜೊತೆಗೆ ಕೊಡಬೇಕು ಅತ್ಯಾಧುನಿಕ ಶಸ್ತ್ರಾಸ್ತ್ರಗಳ
ದೇಹರಕ್ಷಣೆಗೆ ಬುಲೆಟ್ ಫ್ರೂಫ್ ಜಾಕೆಟ್ಟುಗಳ
ತತ್ ಕ್ಷಣಕೆ ನೀಡಬೇಕು ಆದೇಶಗಳ ॥

ಬೇಕಿತ್ತೇ ಇಂತಹ ಆತಂಕದ ರಾಷ್ಟ್ರೀಯ ಆಚರಣೆಗಳು
ಗಾಜಿನ ಬೇಲಿಯ ಹಿಂದಿನಿಂದ ಗಣ್ಯರ ವೀಕ್ಷಣೆ ಭಾಷಣಗಳು
ಏಳು ಎಂಟು, ಹತ್ತು ಸುತ್ತಿನ ಭದ್ರಕೋಟೆ
ಸುತ್ತಲಿನ ನಿವಾಸಿಗಳನ್ನೆಲ್ಲಾ ತೆರವುಗೊಳಿಸಿ
ಅವುಗಳನ್ನೆಲ್ಲ ಸೈನಿಕರು ಆಕ್ರಮಿಸಿ
ರಕ್ಷಣೆ ಒದಗಿಸುವ ಅವಶ್ಯಕತೆಗಳು ॥

ಹಾಡಬೇಕು ಒಂದು ಅಂತ್ಯ ಈ ಉಗ್ರವಾದಕ್ಕೆ
ಕೈ ಜೋಡಿಸಬೇಕು ದೇಶದೇಶಗಳು ಉಗ್ರರನಾಶಕ್ಕೆ
ಕಾಪಾಡಬೇಕು ಅಮಾಯಕರ ಪ್ರಾಣವನ್ನು ಉಗ್ರರಿಂದ
ನೀಡಬೇಕು ಅಭಯ ಅವರ ಬಾಳಿಗೆ, ಸೌಖ್ಯಕ್ಕೆ ಈ ಹುಚ್ಚಾಟದಿಂದ
ನೆಲೆಸಬೇಕು ದೇಶಗಳಲ್ಲಿ ಸುಖ, ಶಾಂತಿ
ನಿರ್ನಾಮವಾಗಬೇಕು ಜಗದಿಂದ ಉಗ್ರರ ಹಾವಳಿ ॥

ಅಂತ್ಯಗೊಳ್ಳಬೇಕು ಭಯದ ವಾತಾವರಣ
ನಿರ್ಮಾಣವಾಗಬೇಕು ನಿರ್ಭಯದ ವಾತಾವರಣ
ಹೆಂಗಸರು ಮಕ್ಕಳು ನಡುರಾತ್ರಿಯಲ್ಲೂ ಓಡಾಡುವಂತಾಗಬೇಕು
ಮಹಾತ್ಮಗಾಂಧಿ ಕನಸಿದ ರಾಮರಾಜ್ಯ ನಿರ್ಮಾಣವಾಗಬೇಕು
ಪ್ರಾಮಾಣಿಕ ಪ್ರಯತ್ನ ಮಾಡಬೇಕು ಸರ್ಕಾರಗಳು
ನನಸಾಗಿಸಬೇಕು ಗಾಂಧೀತಾತನ ಕನಸುಗಳು ॥

ಬಿತ್ತಲು ಪ್ರಾರಂಭಿಸಿ ಮಕ್ಕಳಲ್ಲಿ ದೇಶಪ್ರೇಮವ
ನಿಯಂತ್ರಿಸಿ ಅನಿಯಂತ್ರಿತ ಉಗ್ರತರಬೇತಿ ತಾಣವ
ಪರಿಹರಿಸಿ, ಬಗೆಹರಿಸಿ ಪ್ರಜೆಗಳ ಅವಶ್ಯಕತೆಗಳ
ಗಳಿಸಿ ಅವರ ಒಲವ, ಪ್ರೀತಿಪ್ರೇಮವ
ಒದಗಿಸಿ ಅವರುಗಳಿಗೆ ನೆಮ್ಮದಿಯ ಜೀವನವ
ಒದಗಿಸಿ ಮುಂದಿನ ಜೀವನಕೆ ಭದ್ರತೆಯ ॥

ಬದುಕಿರುವುದೇ ಈ ಭುವಿಯಲ್ಲಿ ನಾಲ್ಕು ದಿನಗಳು
ಜೊತೆಗೆ ಬರಲಾರವು ನಾವು ಗಳಿಸಿದ ಸಂಪತ್ತುಗಳು
ಬರಲಾರರು ನಮ್ಮ ಜೊತೆಗೆ ಕೊನೆಗೆ ಒಡಹುಟ್ಟಿದವರು
ಈ ಸತ್ಯ ಅರಿತಿದ್ದರೂ ಆಗುತ್ತಿದ್ದಾರೆ ಆಸೆಬುರುಕರು
ಕಳೆದುಕೊಳ್ಳುತ್ತಿದ್ದಾರೆ ಜೀವನದ ಸುಖಕ್ಷಣಗಳ
ಅರಿತು ಬಾಳುವುದೇ ಲೇಸು ಸಾರ್ಥಕದ ಕ್ಷಣಗಳ ॥

## 73. ಕೋಲೆ ಬಸವರು:

ಬಂದೆ ನೀನು ನನ್ನ ಬಾಳಿನಲ್ಲಿ ಒಂದು ಸಂಜೆ
ಕಳೆದುಕೊಂಡೆ ನಾನು ನನ್ನತನವ ಅಲ್ಲೆ ಅಂದೆ ॥
ಪೂರೈಸು ನನ್ನೆಲ್ಲ ಆಸೆಗಳ ಎಂದು ನೀನಂದೆ
ಆಗಲಿ ಜೀಯಾ ಎಂದು ತಲೆಯಾಡಿಸಿದೆ ನಾನಂದೇ ॥

ಸಾಗುತಿರೆ ತಲೆಯೆತ್ತಿ ನೀನು ಮುಂದೆ ಮುಂದೆ
ಕುರಿಯಂತೆ ನಡೆದೆ ನಾನು ನಿನ್ನ ಹಿಂದೆ ಹಿಂದೆ ॥
ಹೊರಜಗದಲ್ಲಿ ನಾ ಘರ್ಜಿಸಿದರು ಹುಲಿಯಂತೆ
ಬಂದತಕ್ಷಣ ಮನೆಗೆ ನಾ ಆಗುವೆ ಇಲಿಯಂತೆ ॥

ಕೊಂದುಬಿಡಬೇಕೆನಿಸುತದೆ ನಿನ್ನ ಕೆಲವು ಸಲ
ಒಳಗೊಳಗೇ ಹಲ್ಲುಕಡಿದು ಶಪಿಸಿ ಸುಮ್ಮನಾಗುವೆ ಬಹುಸಲ ॥
ಹೆಣ್ಣೆಂಬ ಕನಿಕರ, ನಿನ್ನ ಆ ತ್ಯಾಗ ಮನೋಭಾವ
ಜೊತೆಗೆ ಲೋಕಾಪವಾದ ತಡೆಯುತ್ತದೆ ಹಲವು ಸಲ ॥

ನನಗೆ ಗೊತ್ತಿಲ್ಲವೇ ನಿನ್ನ ಗಂಡಸುತನ
ಎಂಬ ನಿನ್ನ ಮೂದಲಿಕೆ
ಇಳಿಸಿಬಿಡುತ್ತದೆ ಯಾವುದೇ ಗಂಡಸಿನ
ನಶೆಯನ್ನು, ಮುನಿಸನ್ನು ॥

## 74. ಸಂಕ್ರಾಂತಿ ಸಡಗರ:

ಬಂದಿದೆ ಮತ್ತೆ ಸಂಕ್ರಾಂತಿ ಹಬ್ಬ
ಎಳ್ಳು ಬೆಲ್ಲ ಮನೆಮನೆಗೆ ಬೀರುವ ಹಬ್ಬ
ಹೆಣ್ಮಕ್ಕಳು ಮನೆಗಳಿಗೆ ಎಡತಾಕುವ ಸಮಯ
ರೋಡ್‌ರೋಮಿಯೋಗಳು ಹಿಂಬಾಲಿಸುವ ಸಮಯ
ಪೋಷಕರಿಗೂ, ಪೋಲೀಸರಿಗೂ ತಲೆನೋವಿನ ಸಮಯ ॥

ಹಿಂದೆಲ್ಲಾ ಬಲು ಸಡಗರ ತಿಂಗಳಿನಿಂದ
ಎಳ್ಳು ಬೆಲ್ಲ ಕೊಬ್ಬರಿ ತಯಾರಿಕೆಗೆಂದು
ಸಿಗುವುದು ಮಾರುಕಟ್ಟೆಯಲ್ಲಿ ಎಲ್ಲವೂ ಇಂದು
ವಾಣಿಜ್ಯೀಕರಣವಾಗಿದೆ ಪ್ರಸಾದಗಳೂ ಇಂದು
ಸೋಮಾರಿಗಳಿಗಂತೂ ಸುಸಮಯವಿಂದು॥

## 75. ಹೊಸ ವರ್ಷಾಚರಣೆ ಯಾರಿಗೆ?

ವರುಷ ಹೋಯಿತು, ವರುಷ ಬಂದಿತು
ಮನುಷ್ಯಮಾತ್ರರಿಗೆ ಸಂತಸವ ತಂದಿತು
ಸಂಕಟ ಮರೆಯಲು ಕುಡಿಯುವವರು ಕೆಲವರು
ಸಂತಸದಲ್ಲಿ ಕುಡಿಯುವವರು ಹಲವರು ॥

ಸೂರ್ಯ ಚಂದ್ರರಿಗಿಲ್ಲ ಹೊಸವರುಷ
ಪಡುವುದಿಲ್ಲ ಅವರು ಯಾವುದೇ ಹರುಷ
ಸೂರ್ಯ ಪ್ರತಿಹಗಲು ಬೆಳಗಲೇ ಬೇಕು
ಚಂದ್ರ ಅವನ ಬೆಳಕ ಪ್ರತಿಫಲಿಸಲೇ ಬೇಕು ॥

ಪ್ರಾಣಿ ಪಕ್ಷಿಗಳಿಗಿಲ್ಲ ಹೊಸವರ್ಷಾಚರಣೆ
ಆಹಾರ ಸಿಗದಿದ್ದಲ್ಲಿ ಅವಕೆ ಜಾಗರಣೆ
ರಾತ್ರಿ ಹಗಲೆನ್ನದೆ ಹುಡುಕಬೇಕು ಆಹಾರ
ಎಚ್ಚರ ತಪ್ಪಿದರೆ ಅಗುವವು ಹಂತಕರಿಗೆ ಆಹಾರ ॥

ಚಾಲಕರು ವಾಹನ ಚಲಾಯಿಸಲೇಬೇಕು
ಗೃಹಿಣಿ, ಬಾಣಸಿಗ ಅಡುಗೆ ಮಾಡಲೇಬೇಕು
ವೈದ್ಯ ರೋಗಿಗಳಿಗೆ ಶುಶ್ರೂಷೆ ಮಾಡಲೇಬೇಕು
ಎಲ್ಲರೂ ಅವರವರ ಕೆಲಸ ಮಾಡಲೇಬೇಕು ॥

# 76. ಕಠೋರ ಆದರೂ ಸತ್ಯ:

ರೂಪ ನಿನ್ನದಾದರೇನು ನನ್ನದಾದರೇನು
ಇರುವುದಿಲ್ಲ ನಿರಂತರ
ಆದರೆ ನಮ್ಮ ಮಗು
ನಮ್ಮದಾಗಿರುವುದು ನಿರಂತರ
ಆದರೆ ಅದಕೆ? ನಾವರಿಯೆವು ॥

ಯಾರ ಮಗುವೇ ಆಗಲೀ
ನೀಡುವುದು ತಂದೆತಾಯಿಗೆ ಸಂತಸ
ಕನಿಷ್ಟ ಐದು ವರುಷದವರೆಗೆ
ಬೆಳೆದನಂತರ ಅರಿವಾಗುವುದು
ಅದರ ನಿಜಮುಖ ॥

ಗಂಡು ಮಗನಾದರೆ ಆಗುವನು ಕೊನೆತನಕ
ಹೆಣ್ಣಾದರೆ ಏನಾದರೂ ಮದುವೆಯಾಗುವನಕ
ಎಂಬ ಮಾತು ಜನಜನಿತ
ಆದರೆ ಈ ಮಾತು ಎಷ್ಟು ದಿಟ
ಅನುಭವಿಸಿದವರ ಕೇಳಬೇಕು ಅಭಿಮತ ॥

ಪ್ರಾಣಿಪಕ್ಷಿಗಳೂ ಮರಿಮಾಡುವುವು
ಮುದಿಗಾಲದಲ್ಲಿ ತಮ್ಮ ಸಾಕಬೇಕೆಂದಲ್ಲ
ರೆಕ್ಕೆ ಬಲಿತ ಪಕ್ಷಿ ಹಾರಿಹೋಗುವುದು
ಸ್ವತಂತ್ರ ಬದುಕ ಅರಸಿ
ತನ್ನ ನೆಲೆಯ ತಾನೇ ಅರಸಿ ॥

ನಾವು ಮನುಜರು
ಪ್ರಾಣಿ ಪಕ್ಷಿಗಳಿಗಿಂತ ಭಿನ್ನರು
ನಾವೇಕೆ ಬಯಸಬೇಕು
ನಮ್ಮ ಮಕ್ಕಳ ಆಶ್ರಯ
ನಾವು ಮುದಿಯಾದಾಗ ॥

## 77. ಶುರುವಾಗಿದೆ ಮತ್ತೆ ಮೌಢ್ಯಬಿತ್ತುವ ಸಮಯ:

ಶುರುವಾಗಿದೆ ಮತ್ತೆ ಮೌಢ್ಯಬಿತ್ತುವ ಸಮಯ
ಮೊದಲು ಸಂಕ್ರಾಂತಿ ನಂತರ ಉಗಾದಿ
ಜೊತೆಗೇ ಶುರುವಾಯಿತು ಬಿತ್ತಲು ಬ್ರಾಂತಿ
ಚಾನಲ್ಲುಗಳಲ್ಲಿ ಜ್ಯೋತಿಷಿಗಳ ಫಲಶಾಂತಿ ॥

ಸೂರ್ಯನಿಗಿಲ್ಲದ ಚಲನೆ ನೀಡುವರು ಜ್ಯೋತಿಷಿಗಳು
ದಕ್ಷಿಣದಿಂದ ಉತ್ತರಕ್ಕೆ ಓಡಿಸುವರು ಅವನ
ಸಾವಿರಾರು ವರ್ಷಗಳಿಂದ ಅಲ್ಲಗಳೆಯುತ್ತಿದ್ದರೂ ವಿಜ್ಞಾನಿಗಳು
ಮಾಡುತ್ತಿದ್ದಾರೆ ಇನ್ನೂ ಜನರನ್ನು ಅಜ್ಞಾನಿಗಳು ॥

ಸೌರಮಂಡಲದಲ್ಲಿ ಸೂರ್ಯನಸುತ್ತ ಸುತ್ತುವವು ಗ್ರಹಗಳು
ಪಂಚಾಂಗದಲ್ಲಿ ಸೂರ್ಯನನ್ನೇ ಸುತ್ತಿಸುವರು ಗ್ರಹಗಳ ಜೊತೆಗೆ
ಹಲವಾರು ಗ್ರಹಗಳು ಒಂದೇ ಮನೆಯಲ್ಲಿರುವುದು ಅಸಾಧ್ಯವಾದರೂ
ಕೂಡಿಸುತ್ತಾರೆ ಚಂದ್ರ, ಸೂರ್ಯ, ಗುರುವನ್ನು ಒಂದೇ ಮನೆಯೊಳಗೆ ॥

ಉಗಾದಿ ಬಂತೆಂದರೆ ನವ ಯುಗಾರಂಭ
ನೂತನ ವರ್ಷದ ಫಲಘೋಷಣೆ ಆರಂಭ
ಯುಗಪುರುಷ ಆ ವಾಹನ ಏರಿ ಬರುತ್ತಾನೆ
ಹೇಳಿ ನೀವು ಯಾವ ವಾಹನ ಏರಿ ಪ್ರಯಾಣಿಸುತ್ತೀರಿ ॥

ಒಬ್ಬ ಮತ್ತೊಬ್ಬನನ್ನು ಮಾಡಬಹುದು ಮೂರ್ಖ ಜೀವನಪೂರಾ
ಮಾಡಬಹುದು ಒಬ್ಬ ಹಲವರನ್ನು ಕೆಲದಿವಸ ಮಾತ್ರ
ಮಾಡಲಾರ ಎಲ್ಲರ ಮೂರ್ಖರನ್ನಾಗಿ ಎಲ್ಲಕಾಲಕ್ಕೂ ಎನ್ನುವರು
ಆದರೆ ಈ ಜ್ಯೋತಿಷಿಗಳು ಮಾಡುತ್ತಿರುವುದಕ್ಕೇನನ್ನುವರು ॥

ಸುತ್ತಮುತ್ತಲೂ ನಡೆಯುತ್ತಿರುವಾಗ ಅನಾಚಾರ, ಅತ್ಯಾಚಾರ
ಪಾಪ ಪುಣ್ಯದ ಪರಿಕಲ್ಪನೆಯೇ ತಲೆಕೆಳಕಾಗಿರುವಾಗ
ನ್ಯಾಯಾಲಯದಲ್ಲಿ ಸತ್ಯದಮೇಲೆ ಹೊಡೆದಂತೆ ಸುಳ್ಳು ಹೇಳುತ್ತಿರುವಾಗ
ನ್ಯಾಯವಾದ ಹಾದಿಯಲ್ಲಿ ನಡೆವವರನ್ನು ಹುಡುಕುವುದು ಹೇಗೆ ಗೆಳೆಯಾ ॥

(ಕರ್ನಾಟಕ ಒಕ್ಕಲಿಗರ ವಿಕಾಸ ವೇದಿಕೆ 23-1-2016ರಂದು ನಡೆಸಿದ ಸಂಕ್ರಾಂತಿ ಕವಿಗೋಷ್ಠಿಯಲ್ಲಿ ಬಹುಮಾನಿತ ಕವನ)

## 78. ಹೆಣ್ಣುಗಳೇ ಮರೆತಿರೇಕೆ:

ಹೆಣ್ಣುಗಳೇ ಮರೆತಿರೇಕೆ ಈ ಸತ್ಯ
ಅತ್ತೆಯಾಗಿದ್ದರೂ ನೀವಿಂದು
ಸೊಸೆಯಾಗಿದ್ದಿರಲ್ಲವೇ ನೀವಂದು
ಮರೆತುಬಿಡಿ ನಿಮ್ಮತ್ತೆಯ ದುರ್ವತನೆಯಾ
ಕಾಣಿರಿ ಸೊಸೆಯಲ್ಲಿ ನಿಮ್ಮಮಗಳ ಮುಖವಾ ॥

ಬರುವಳು ಎಂದೂ ಕಾಣದ ಹೊಸಮನೆಗೆ,
ತನ್ನವರೆಲ್ಲರ, ತನ್ನದೆಲ್ಲವ ಬಿಟ್ಟು,
ತೋರಿರಿ ಪ್ರೀತಿಯ, ನೀಡಿರಿ ಸಮಯವ,
ಹೊಸಬರನ್ನು ತನ್ನವರನ್ನಾಗಿ ಸ್ವೀಕರಿಸಲು
ಹೊಂದಿಕೊಳ್ಳಲು ಹೊಸಮನೆಗೆ ॥

ಅನ್ನಿಸಲಿ ಇದೂ ತನ್ನ ಮನೆಯೆಂದು,
ತನ್ನತ್ತೆಯೂ ತನ್ನ ಅಮ್ಮನೆಂದು
ದೂರಾಗಲಿ ಆತಂಕದ ಕ್ಷಣಗಳು
ಮೂಡಲಿ ಸುರಕ್ಷತೆಯ ಭಾವನೆಗಳು
ಬೆಸೆಯಲಿ ಎರಡೂ ಮನೆಯ ಕೊಂಡಿಗಳು ॥

# 79. ಚುರುಮುರಿ

ಚುರುಮುರಿ, ಚುರುಮುರಿ
ತಿಂದವರ ಬಾಯೆಲ್ಲ ಉರಿಉರಿ
ಹಾಕಿರುತ್ತಾರೆ ಸಖತ್ ಖಾರ
ಹೀರಿರುತ್ತೆ ಅದರ ಸಾರ ॥

ಸೇರಿಸುತ್ತಾರೆ ಈರುಳ್ಳಿ ಕ್ಯಾರಟ್ ತುರಿ,
ಮೇಲೆ ಹಾಕುತ್ತಾರೆ ಶೇಂಗಾ, ಪುರಿ
ಹಾಕಿಕೊಂಡರೆ ಬಾಯಿಗೆ
ಮಜಾ ಒಂದು ಥರಾ ಸಂಜೆಗೆ ॥

ಯುವಜನತೆಗೆ ಬೇಕೇಬೇಕು
ಪ್ರತಿಸಂಜೆ ಕರಿದ ಸರಕು
ಬಾಯಿಕೆಟ್ಟಾಗಬೇಕು ಗರಿಗರಿ
ಖಾರಖಾರ ಆದ ಚುರುಮುರಿ ॥

## 80. ಹೇಗಿದೆ ಈ ವಿಚಾರ?

ತಮವ ಕಳೆವ ಓ ಸೂರ್ಯದೇವ
ನಿಸಗಿಲ್ಲದಿದ್ದರೂ ಅಸ್ತಮಾನ ಉದಯ
ನಮ್ಮವರೇಕೆ ಪ್ರತಿದಿನ
ಬೆಳಿಗ್ಗೆ ನಿನ್ನ ಉದಯಿಸಿ
ಸಂಜೆ ಅಸ್ತಂಗತಗೊಳಿಸುತ್ತಿದ್ದಾರೆ ॥

ನೀನು ಹಗಲು ಬೆಳಗಿದರೆ
ಚಂದ್ರ ರಾತ್ರಿ ಬೆಳಗುವನು
ಅವನ ಬೆಳಗುವಿಕೆಗೂ ನೀನೇ ಕಾರಣವೆಂಬ
ಸರಳ ವಿಚಾರ ಹೊಳೆಯುವುದಿಲ್ಲ
ಏಕೆ ಜನರ ಮನಕೆ ॥

ಇಂದಿಗೂ ಜ್ಯೋತಿಷಿಗಳ ಪ್ರಕಾರ
ನಿನಗೂ ಚಂದ್ರನಿಗೂ ಒಂದೇ ಸ್ಥಾನ
ನೀನೂ ಗ್ರಹ, ಅವನೂ ಗ್ರಹ
ನಕ್ಷತ್ರ ಗ್ರಹಗಳ ನಡುವಿನ ವ್ಯತ್ಯಾಸ
ಈ ಪಂಡಿತರಿಗೇಕೆ ತಿಳಿದಿಲ್ಲ ॥

ತಮ್ಮ ಭವಿಷ್ಯದ ಬಗೆಗೇ
ಕಲ್ಪಿಸಿಕೊಳ್ಳಲಾಗದ ಈ ಮಂದಿ
ಇತರರ ಭವಿಷ್ಯ ಹೇಳುವ ನೆಪದಲ್ಲಿ
ತೊಡಗಿದ್ದಾರೆ ತಮ್ಮ ಹೊಟ್ಟೆ
ತುಂಬಿಸಿಕೊಳ್ಳುವ ಕಾಯಕದಲ್ಲಿ ॥

ಜನರ ಮೌಢ್ಯ ನಿವಾರಿಸಬೇಕಿರುವ
ಬಡಾಯಿ ಕೊಚ್ಚಿಕೊಳ್ಳುವ
ಟೀವೀ ಚಾನಲ್ಲುಗಳು ಇದೇ ಜ್ಯೋತಿಷಿಗಳನ್ನು
ಪ್ರತಿಬೆಳಿಗ್ಗೆ ಕೂಡಿಸಿಕೊಂಡು
ಬಿತ್ತುತ್ತಿದ್ದಾರೆ ಮೌಢ್ಯ ಜನರಲ್ಲಿ ॥

## 81. ದೇಹವೆಂಬ ಸೋಜಿಗ - 2

ಇರುವುದು ಮಿದುಳು ಬುರುಡೆಯಲ್ಲಿ
ಸುಭದ್ರವಾದ ಕವಚದಲ್ಲಿ
ನಮ್ಮೆಲ್ಲ ಆಲೋಚನೆಗಳ ಸಾಗರ
ಕೈಕಾಲುಗಳ ಚಲನೆಗೂ ಅದು ಆಗರ ॥

ಕಣ್ಣುಗಳು ಇರುವವೆರಡು
ಪೂರ್ಣನೋಟಕೆ ಬೇಕು ಇವೆರಡೂ
ಕಾಪಾಡಿಕೊಂಡರೆ ನಿಮ್ಮ ದೃಷ್ಟಿ
ಎಷ್ಟೊಂದು ಸುಂದರ ಈ ಸೃಷ್ಟಿ ॥

ಹೃದಯಾ ಅದು ಇದೆಯಾ ಎನ್ನದಿದ್ದರೂ
ಮಾಡುತ್ತದೆ ಅದರ ಕಾರ್ಯ ನಿರಂತರ
ರಕ್ತಚಲನೆ ಏರುಪೇರಾದಲ್ಲಿ
ಆಸುಪತ್ರೆಗೆ ಆಂಬುಲೆನ್ಸಲಿ ॥

ಇವೆ ಎರಡು ಶ್ವಾಸಕೋಶಗಳು
ಉಸಿರಾಡಬೇಕು ಅವು ನಿರಂತರ
ಎದ್ದಿರುವಾಗಲೂ, ನಿದ್ದೆಮಾಡುವಾಗಲೂ
ತಾಳ ತಪ್ಪಿದಲ್ಲಿ ಚಿರಂತನ ನಿದ್ರೆ ನಮಗೂ ॥

ಇರುವುದೊಂದು ಯಕೃತ್ತು
ತರುವುದು ತಿಂದ ಆಹಾರಕ್ಕೆ ಆಪತ್ತು
ಹೀರುವುದು ಅದರ ಸಾರವನ್ನು
ಹೊರತಳ್ಳುವುದು ಉಳಿದ ಕಸವನ್ನು ॥

ಇರಬೇಕು ದೇಹದೆಲ್ಲ ಅಂಗಗಳು
ಆಗಲೇ ಪರಿಪೂರ್ಣ ಮಾನವ
ಲೋಪಗೊಂಡರೆ ಯಾವುವೇ ಅಂಗಗಳು
ಆಗುವೆ ನೀನು ವಿಕಲಾಂಗ ಮಾನವ ॥

## 82. ಲುಕ್ಸಾನು ಯಾರಿಗೆ, ಲಾಭ ಯಾರಿಗೆ:

ಕಾಲ ಕೆಟ್ಟಿತೆಂದು  ದೂರಬೇಡ ಮಾನವ
ಅದು ಕೆಡಲೂ ಕಾರಣವು ನೀನೇ ಅಲ್ಲವೇ ಮಾನವ
ನಿನ್ನ ತಪ್ಪ ನೀ ತಿಳಿ ಮೊದಲು
ಮಿಕ್ಕದೆಲ್ಲ ತಂತಾನೆ ಸಲೀಸು ॥

ಮಳೆಬಾರದೇ ಬೆಳೆ ಬರದು
ಬಂದ ಬೆಳೆಗೆ ಮಾರುಕಟ್ಟೆ ಇರದು
ಬದುಕಲು ಬಾಳಲು ಇನ್ಯಾವ ದಾರಿ
ಉಳಿದುದೊಂದೇ ಅದುವೇ ಆತ್ಮಹತ್ಯೆಯ ದಾರಿ ॥

ಬೆಳೆದವಗೆ ಸಿಗುತಿದೆ ಕಿಲುಬುಕಾಸು
ಗ್ರಾಹಕ ತೆರಬೇಕದಕೆ ದುಬಾರಿ ಕಾಸು
ತಿಂದು ತೇಗಿದರು ಇವರಿಬ್ಬರ ಕಾಸು
ಎರಡೂ ಕೈನಲ್ಲಿ ದಳ್ಳಾಳಿಗಳು ॥

## 83. ನವ್ಯಕವಿ(ತೆ)

**ಅಮರವಾಗಿರಬೇಕು** ನನ್ನ ಕವಿತೆ
ಎಂಬ ಹಂಬಲ ಎನಗಿಲ್ಲ,
ರಾಗರಂಜನೆಯೂ ನನಗೆ ಬೇಕಿಲ್ಲ
ಗಣಮಾತ್ರೆಗಳ ಗೊಡವೆ ನನಗಿಲ್ಲ
ಮನದ ಭಾವನೆಗಳ ನಿಮಗೆ
ತಲುಪಿಸುವುದಷ್ಟೇ ನನ್ನ ಹಂಬಲ,
ಇದಕೆ ಬೇಕು ನಿಮ್ಮ ಬೆಂಬಲ

## 84. ಸ್ಮಾರ್ಟ್ ಫೋನ್:

ಅಂಗೈನಲ್ಲಿನ ಪುಸ್ತಕ
ಪರ್ಯಾಯ ಮಸ್ತಕ
ಕ್ರಿಯಾತ್ಮಕತೆಯ ವಿನಾಶಕ
ಆದರೂ ಸಕಲ ವಿಷಯಗಳ ಕೋಷ್ಟಕ ॥

## 85. ಸ್ವಾಗತ ಗೀತೆ

ಸ್ವಾಗತವು ನಿಮಗೆ, ಸಾಹಿತ್ಯ ದಾಸೋಹಕ್ಕೆ
ಹಿರಿಕಿರಿ ಕವಿಗಳ ಸಮ್ಮಿಲನಕ್ಕೆ,
ಮನಸ್ಸಿಗೆ ಮುದನೀಡುವ ಕಥೆ ಕವನ ವಾಚನಕ್ಕೆ
ಭರಪೂರ ಭೋಜನಕ್ಕೆ ॥

ಮಗಸಟ್ಟೆ ಮಸ್ತಕಕ್ಕೆ ಯಾ ಕಡಿತದ ಮಾರಾಟಕ್ಕೆ
ಹೊಸಹೊಸ ಪರಿಚಯಕ್ಕೆ
ನಿಮ್ಮ ಪರಿಧಿಯ ವಿಸ್ತಾರಕ್ಕೆ
ಸ್ವಾಗತವು ನಿಮಗೆ ಸಾಹಿತ್ಯ ದಾಸೋಹಕ್ಕೆ ॥

## 86. ಎರಡೂ ಕೈ ಸೇರಿದರೆ ತಾನೆ ಚಪ್ಪಾಳೆ:

ನಾನು ರಾಮ ನೀನು ಸೀತೆ
ನಾನು ಕೃಷ್ಣ ನೀನು ರಾಧೆ
ಎನ್ನಲು ಇದೇನು ಪುರಾಣವೇ
ಎರಡೂ ಕೈ ಸೇರಿದರೆ ತಾನೆ ಚಪ್ಪಾಳೆ ॥

ನೀನು ಭೂಲೋಕ ಸುಂದರಿ
ನಾನು ಈ ಲೋಕದ ಸುಂದರ
ಎನ್ನಲು ಇದೇನು ನಾಟಕವೇ
ಎರಡೂ ಕೈ ಸೇರಿದರೆ ತಾನೆ ಚಪ್ಪಾಳೆ ॥

ನೀನು ಯಕ್ಷಲೋಕದ ಆ ರತಿ
ನಾನು ಸುರಲೋಕದ ಮನ್ಮಥ
ಎನ್ನಲು ಇದೇನು ಗಂಧರ್ವಲೋಕವೇ
ಎರಡೂ ಕೈ ಸೇರಿದರೆ ತಾನೆ ಚಪ್ಪಾಳೆ ॥

ಒಟ್ಟಿನಲ್ಲಿ ಏನು ಸುಖ, ಏನು ಆರಾಮ
ಹೇ ರಾಮಾ, ಹೇ ಕೃಷ್ಣಾ
ಇದಲ್ಲವೇ ಹರಾಮ
ಮತ್ತೇನು ರಾಮ ಕೃಷ್ಣ ॥

## 87. ನಿತ್ಯ ಸತ್ಯ:

ದಂಪತಿಗಳ ನಡುವಿರಬೇಕು ಸತ್ಯ,
ತೆರೆದಿಡಬೇಕು ಮನವ ನಿತ್ಯ,
ಹಂಚಿಕೊಂಡರೆ ಪರಸ್ಪರ ಸತ್ಯ
ಬಾಳಾಗುವುದು ಸಹ್ಯ ॥

# 88. ಜೀವನ ಚಕ್ರ

**ಹುಟ್ಟು ಮತ್ತು ಶೈಶವ:**

ತಾಯ ಗರ್ಭ ಹೊರದೂಡಿದೆ
ಕೋಮಲಚರ್ಮದವಾಸನೆ ಘಮ್ಮೆನಿಸಿದೆ
ಹೊರಜಗವ ಕಂಡು ಗಾಬರಿಯಾಗಿದೆ
ಅಳುವೆ ನಿನ್ನ ಸಂವಾದವಾಗಿದೆ ॥

ಆಗತಾನೆ ಜಗಕೆ ಬಂದ ಕಂದ ನೀನು
ತಂದೆ ತಾಯಿ ಪಟ್ಟಕ್ಕೆ ಕಾರಣವೆ ನೀನು
ಬಂಜೆಯೆಂಬ ಅಪವಾದ ತಪ್ಪಿಸಿದೆ ನೀನು
ಅವರ ಬಾಳಿಗೆ ಸಂತಸವ ತಂದೆ ನೀನು ॥

ಚರ್ಮ ಮೃದುವಾಗಿದೆ
ದೃಷ್ಟಿ ಮಸುಕಾಗಿದೆ
ನಗು ಆಕರ್ಷಕವಾಗಿದೆ
ಎದೆಹಾಲು ನಿನಗಾಗಿ ಕಾಯುತಿದೆ॥

**ಬಾಲ್ಯ:**

ಚರ್ಮ ಹದವಾಗುತ್ತಿದೆ
ಕಣ್ಣುಗಳಲ್ಲಿ ಕನಸು ತುಂಬಿದೆ

ಮೊಲೆ ಯಾ ಮೀಸೆ ಮೂಡುತಿದೆ
ಜಗವ ಗೆಲ್ಲುವ ಛಲವಿದೆ ॥

ಯೌವ್ವನ:

ಚರ್ಮ ಗಢುಸಾಗಿದೆ
ದೇಹ ಬಲಿಷ್ಠವಾಗಿದೆ
ಬೆವರು ಕಮಟು ವಾಸನೆ ಹೊಂದಿದೆ
ಜೀವನದ ಗುರಿ ಸ್ಪಷ್ಟವಿದೆ॥

**ವೃದ್ಧಾಪ್ಯ:**

ಚರ್ಮ ಜೋತುಬಿದ್ದಿದೆ
ಕೀಲುಗಳು ಸಡಿಲಾಗಿವೆ
ಬೇನೆ ಸಹಿಸಲಾಗದಿದೆ
ಜವನ ಕರೆಗೆ ಕಾಯುತಿವೆ ॥

ಸಾವು:

ಕಣ್ಣುಗಳು ನಿಸ್ತೇಜವಾಗಿವೆ
ಕೈಕಾಲು ಸೆಟೆದುಕೊಂಡಿವೆ
ಉಸಿರು ನಿಂತುಹೋಗಿದೆ
ಸ್ಮಶಾನದ ದಾರಿ ಕಾಯುತಿವೆ ॥

## 89. ಸೆಟ್ಟಿ ವ್ಯಾಪಾರ

ಇದ್ದನೊಬ್ಬ ಸೆಟ್ಟಿ
ಮಾರುತ್ತಿದ್ದ ಬೇಕಾಬಿಟ್ಟಿ
ಮೇಲೂ ಕೊಡುತ್ತಿದ್ದ ಪುಗಸಟ್ಟೆ
ಕೊಂಡವರೆಲ್ಲ ಕೈಕೊಟ್ಟು
ಆಯಿತವಗೆ ಲಾಸ್ ಸಿಕ್ಕಾಪಟ್ಟೆ

## ೩೦. ವಿಪರ್ಯಾಸ

ಅಂದು ಟ್ಯೂಷನ್ನಿಗೆ ಹೋಗುವುದು ಅವಮಾನದ ವಿಷಯ
ಇಂದು ಪೋಷಕರಿಗೆ ಅದು ಹೆಮ್ಮೆಯ ವಿಷಯ
ಅಂದು ಆರೋಪ ಬಂದತಕ್ಷಣ ರಾಜೀನಾಮೆ ನೀಡುತ್ತಿದ್ದರು
ಇಂದು ಅಪರಾಧ ಸಾಬೀತಾಗಲೀ ನೋಡೋಣ ಎಂದು ಬೀಗುತ್ತಿರುತ್ತಾರೆ
ಅಂದು ರೋಗಿಗಳ ಕಾಳಜಿಗೇ ಪ್ರಥಮ ಪ್ರಾಶಸ್ತ್ಯ
ಇಂದು ಹಣ ಮಾಡುವುದೇ ಮೊದಲು ನಂತರ ಉಳಿದೆಲ್ಲ
ಅಂದು ಗಂಟೆಗಟ್ಟಲೇ ಕಛೇರಿ ನೀಡುತ್ತಿದ್ದರು ವಿದ್ವಾಂಸರು
ಇಂದು ಆಗಾಗ್ಗೇ ಇಣುಕುತ್ತಿರುತ್ತಾರೆ ಸ್ಮಾರ್ಟ್ ಫೋನಿನೆಡೆಗೆ
ಅಂದು ನಿಸ್ವಾರ್ಥ ಸಂಬಂಧಕ್ಕಾಗಿ ಹಾತೊರೆಯುತ್ತಿತ್ತು ವಿಶ್ವ
ಇಂದು ಎಲ್ಲರಲ್ಲೂ ಎಲ್ಲದರಲ್ಲೂ ತುಳುಕುತ್ತಿದೆ ಸ್ವಾರ್ಥ
ಅಂದು ತಪ್ಪಾಗಿ ವಾರ್ತೆ ಓದಿದುದಕ್ಕೆ ಕೆಲಸದಿಂದ ವಜಾ
ಇಂದು ತಪ್ಪು ತಪ್ಪು ಉಚ್ಚಾರಣೆ ಇದ್ದವರೇ ವರದಿಗಾರರು
ಅಂದು ಭಗವದ್ಗೀತೆಯೇ ಮಾರ್ಗದರ್ಶಕ
ಇಂದು ತ್ರೀಜಿ ಫೋರ್‌ಜೀ ಫೋನೇ ದಾರಿದೀಪ ॥

## 91. ಕವಿತೆಯಲ್ಲಿ ಏನಿರಬೇಕು?

ಇರಬೇಕು ಕವಿತೆಯಲ್ಲಿ ಗೇಯತೆ
ಇಷ್ಟು ಲಗುವಿಗೆ ಒಂದು ಗುರು
ಲೆಖ್ಖಾಚಾರ ಇರಬೇಕು ಪಕ್ಕಾ
ಅದೆಲ್ಲಾ ಸರಿ ಸ್ವಾಮಿ
ಇರಬೇಡವೇ ತನ್ಮಯತೆ ॥

ಯಾರಿಗಾಗಿ ಸ್ವಾಮಿ ತಮ್ಮ ಕಾವ್ಯರಚನೆ
ತಮಗೋ, ವಾಚಕನಿಗೋ
ತಾವು ಕಾವ್ಯ ರಚಿಸಬೇಕು
ಅದು ವಾಚಕನಿಗೆ ರುಚಿಸಬೇಕು
ಆಗಲ್ಲವೇ ಸಾರ್ಥಕತೆ ॥

ಬಿಡಿ ನಿಮ್ಮ ಹುಂಬತನವ
ತೋರಿ ನಿಮ್ಮ ಧಾರಾಳತನವ
ಸೀಮಿತವಾಗದಿರಿ ಪಾಂಡಿತ್ಯ ಪ್ರದರ್ಶನಕೆ
ನೆಡಿರಿ ದೃಷ್ಟಿ ಬೋಳೆಮನಕೆ
ಅದುವೆ ಸಾಮಾನ್ಯ ಜನಕೆ ॥

ಹಾಡಲಾಗುವುದಿಲ್ಲ ಎಂಬ ಭಯವೇ ನಿಮಗೆ
ಹಾಕಲಿಲ್ಲವೇ ರಾಗ ಅನಂತಸ್ವಾಮಿ
ನಿಸಾರರ ಆ ಗದ್ಯಕವಿತೆಗೆ
ಇರಬೇಕು ರಾಗ ಸಂಯೋಜನೆಗೆ
ಕೇಳುಗನ ಕಿವಿಯ ಇಂಪಿಗೆ ॥

## 92. ಮಹಿಳೆಯರು ನಾವ್ ಮಹಿಳೆಯರು

ಮಹಿಳೆಯರು ನಾವ್ ಮಹಿಳೆಯರು
ವಸ್ತ್ರಾಭರಣ ಪ್ರಿಯರು
ಮಿತಿಯಿಲ್ಲ ನಮ್ಮ ಆಸೆಗಳಿಗೆ
ಈ ಭೂಮಿ ಆಕಾಶ ಇರುವವರೆಗೆ॥

ಎಷ್ಟೊಂದು ಬಣ್ಣ, ಎಷ್ಟೊಂದು ವಿನ್ಯಾಸ
ಇರುವುದೆಷ್ಟೊಂದು ವೈವಿಧ್ಯತೆ
ಕೊಳ್ಳುತ್ತಲೇ ಇರಬೇಕೆನಿಸಿದೆ ಸೀರೆ
ನಾನಾಗಿರುವುದರಿಂದ ನೀರೆ ॥

ಶೋ ರೂಮಿನಲಿ ನಿಂತಿಹಳು ಕೃತಕ ಸುಂದರಿ
ಬಣ್ಣದಾ ಸೀರೆ ಅವಳಿಗೆ ಉಡಿಸಿರುವಿರೀ
ಉಟ್ಟುನೋಡಿದರೆ ನಾನೂ ಆ ಸೀರೆ
ಕಾಣುವೆನಾ ಅವಳಂತೆ ನಾನೂವೇ ರೀ ॥

ತೊಟ್ಟಿಹಳು ನಟಿ ಚಂದದಾ ಆ ಸೀರೆ
ಅದಕೆ ಇಟ್ಟಿಹರು ಅವಳ ಹೆಸರನ್ನೇ
ಆಸೆ ಚಿಗುರಿದೆ ನನ್ನ ಮನದಲ್ಲಿ
ಉಡಬೇಕೆಂದು ಆ ಸೀರೆ ॥

## 93. ಬದುಕು ಚಕ್ರ - ತೀರ್ಥ

ಚಲಿಸುವ ಚಕ್ರದ ಮೇಲೆ
ನಿಂತಿರಲೂ ಬೇಕು ಚಲನೆ
ಜೀವನದಲ್ಲೂ ಕೊನೆವರೆಗೂ
ಇರಬೇಕು ಚಟುವಟಿಕೆಯ ಚಲನೆ ॥

ಬದುಕಬೇಕು ಎನ್ನುವವನಿಗೆ
ಆಡುತಿರಬೇಕು ಉಸಿರು
ಹಾಡಬೇಕು ಎನ್ನುವವನಿಗೆ
ಇರಬೇಕು ದೀರ್ಘ ಉಸಿರು ॥

ಚಕ್ರದ ನಿರಂತರ ಚಲನೆಗೆ ಬೇಕು
ಆಗಾಗ ತಾಂತ್ರಿಕ ನಿರ್ದೇಶನ
ಜೀವನ ಸಾಗಿಸಲೂ ಬೇಕು
ಆಗಾಗ ಸೂಕ್ತ ಮಾರ್ಗದರ್ಶನ ॥

ನಿಂತ ನೀರು, ಕೆರೆಯಾಗುವುದು
ಹರಿಯುವ ನೀರು, ನದಿಯಾಗುವುದು
ಕೆರೆಯೇ ಆಗಲೀ, ನದಿಯೇ ಆಗಲೀ
ಅದಕೆ ಮಳೆಯೇ ಬೇಕಾಗುವುದು ॥

ಮನುಜನ ಮನ
ನಿಂತ ನೀರಾಗಬಾರದು
ಹರಿಯುವ ನದಿಯಾಗಬೇಕು
ಇದು ಬಲ್ಲವರ ಬಲ್ಲಿದರ ಬಯಕೆ ॥

ಮನುಜನ ಮನ
ತೆರೆದುಕೊಳ್ಳಬೇಕು ಹೊರಜಗಕೆ
ಮುಚ್ಚಿಕೊಳ್ಳಬೇಕು ನೀಲಿಜಗಕೆ
ಇರಬೇಕು ಸದಾ ಎಚ್ಚರಿಕೆ ॥

## 94. ಸ್ವರ್ಗ - ನರಕ :

ಶೈವರಿಗೆ ಶಿವಾಚಾರ್ಯ
ಮಾಧ್ವರಿಗೆ ಮಧ್ವಾಚಾರ್ಯ
ಮತ್ತೊಂದು ಗುಂಪಿಗೆ ರಾಮಾನುಜಾಚಾರ್ಯ
ಆಚಾರಬಿಟ್ಟರೂ ಆಚಾರ್ಯರ ಬಿಡುವುದಿಲ್ಲ
ಆಚಾರ್ಯರನ್ನೇಬಿಟ್ಟರೂ ಬಿಡುವುದಿಲ್ಲ ಮತ ॥

ಪ್ರಸಾದಕ್ಕೋ, ಪ್ರವಚನಕ್ಕೋ
ಹಾಕುವರು ಹಾಜರಿ ಪ್ರತಿದಿನ
ಹರಟುವರು ತಮ್ಮವರೊಡನೆ ಈ ಜನ
ಸಂಪಾದಿಸಲೆಂದು ಪುಣ್ಯದ ಗಂಟು
ಸತ್ತಮೇಲೆ ಸಿಗಲೆಂದು ಸ್ವರ್ಗಕೆ ಟಿಕೇಟು ॥

ತಿಳಿ ಮೂಢಾ ಸ್ವರ್ಗ ನರಕ ಬೇರೆಲ್ಲೂ ಇಲ್ಲ
ಇರುವುವೆಲ್ಲ ಈ ಇಹದಲ್ಲೇ
ಅನುಭವಿಸಬೇಕು ಎಲ್ಲ ಬದುಕಿರುವಾಗಲೇ
ಇತರರ ಕಂಡು ಮರುಗಿದರೆ ಅದೇ ಸ್ವರ್ಗ
ಅವರ ಕಂಡು ಕರುಬಿದರೆ ಅದೇ ನರಕ ॥

## 95. ತೆರಿಗೆ ಚಮತ್ಕಾರ

ನಾವಿರುವ ತಾಣ, ನಗರಸಭೆಯ ಅಂಕಣ
ಕಟ್ಟಿದರೂ ಸಕಾಲಕ್ಕೆ ತೆರಿಗೆ, ಸೌಲಭ್ಯಗಳಿಂದ ವಂಚಿತ।
ಐದು ವರ್ಷಗಳಿಗೊಮ್ಮೆ ಪುನರ್ನಿರ್ಧಾರವಾಗುವುದು ಸೆಸ್ಸು
ಆಗ ನಡೆಯುವುದು ಒಳಗೊಳಗೇ ಭಾರೀ ಬಿಸಿನೆಸ್ಸು ।
ಮೇಲ್ನೋಟಕೆ ಜಾರಿ ಆಗುವುದು ನೋಟೀಸು
ನಂತರ ತಿಳಿದುಬರುವುದು, ಅದು ಬರೀ ಬೋಗಸ್ಸು
ಕಾಸು ಕಮಾಯಿಸಲು ಇದು ಒಂದು ಹಾಸು॥

## 96. ಕಾಡುತಿದೆ ನಿನ್ನ ನೆನಪು ಬಾಪು

ಓ ಮಹಾತ್ಮ, ನಿನ್ನನ್ನು ಹಾಗೆನ್ನುವುದೇ ಲೇಸು
ಗಾಂಧಿ ಎಂದಿದ್ದರೆ ಮೇಲೇಳುತ್ತವೆ ಹತ್ತಾರು ಕೈಗಳು
ಹಾಗಾಗಿ ನೀನೊಬ್ಬನೇ ಮಹಾನ್ ಆತ್ಮ
ಎಲ್ಲಿದ್ದೀಯಾ ನೀನು ಇಂದು ಮಹಾತ್ಮ ॥

ಸ್ವಾತಂತ್ರ್ಯ ಬಂದತಕ್ಷಣ ಬಾಪು
ಅಂದು 'ಕಾಂಗ್ರೆಸ್' ವಿಸರ್ಜಿಸಿ ಎಂದೆ ನೀನು
ಈಡೇರಲಿಲ್ಲ ನಿನ್ನಾಸೆ ಇಂದಿಗೂ
ಬೇಕು ಎಲ್ಲರಿಗೂ ಈ ಕಾಂಗ್ರೆಸ್ ಎಂದೆಂದಿಗೂ
ಅಮೆರಿಕೆಯಲ್ಲೂ ಉಳಿದಿದೆ ಕಾಂಗ್ರೆಸ್ ಇಂದಿಗೂ ॥

ಭಾರತದ ಕಟ್ಟಕಡೆಯ ವ್ಯಕ್ತಿಗೆ ಉಡಲು ಬಟ್ಟೆ ಸಿಗುವವರೆಗೂ
ಇರಲು ನೀ ನಿರ್ಧರಿಸಿದೆ ತುಂಡುಬಟ್ಟೆಯಲ್ಲಿಯೇ
ರಾಜಕಾರಣಿಗಳು ಕಂಗೊಳಿಸತೊಡಗಿದರು ಶ್ವೇತವಸ್ತ್ರದಲ್ಲಿಯೇ
ಚಿತ್ರನಟಿಯರು, ಕ್ಯಾಬರೆ ನರ್ತಕಿಯರು ಮಾತ್ರ
ಅಳವಡಿಸಿಕೊಂಡರು ನಿನ್ನ ತುಂಡುಬಟ್ಟೆ ಸೂತ್ರ॥

ಉಳಿಸಿಕೊಂಡಿವೆ ಎಲ್ಲ ರಾಜಕೀಯ ಪಕ್ಷಗಳು
ಇಂದಿಗೂ ನಿನ್ನ ಹೆಸರನ್ನು ಶಾಶ್ವತವಾಗಿ
ಅವರು ಹಾಕಿಕೊಳ್ಳುವ ಟೋಪಿಗಾಗಿ
ಇತರರಿಗೆ ಹಾಕುವ ಟೋಪಿಗಾಗಿ
ಬಣ್ಣ ಮತ್ತು ಚಿನ್ಹೆಗಳು ಮಾತ್ರ ಬೇರೆಬೇರೆ ॥

ಎಲ್ಲ ಚಳುವಳಿಗಳ ಮುಂಚೂಣಿಯಲ್ಲಿ
ಕಾಣಸಿಗುತ್ತದೆ ನಿನ್ನ ಚಿತ್ರಪಟ,
ನಿನ್ನ ಪ್ರತಿಮೆ ಮುಂದೆ ಕೂರುತ್ತಾರೆ
ನಿನ್ನ ಗುಣಗಾನ ಮಾಡುತ್ತಾರೆ
ಅಷ್ಟಕ್ಕೇ ಸೀಮಿತ ಅವರ ಚಟ ॥

ಇವುಗಳ ಬದಲಿಗೆ ನೀ ಬೋಧಿಸಿದ
ತತ್ವಗಳನ್ನು ಪಾಲಿಸಿದ್ದರೆ ಆಗುತ್ತಿತ್ತು
ನಿಜ ಜನಕಲ್ಯಾಣ, ಅದುವೇ ನಾವು
ನಿನಗೆ ಸಲ್ಲಿಸಬಹುದಾದ ನಿಜ ನಮನ ॥

## 97. ಬದುಕಿನ ವ್ಯಥೆ

ಕೇಳದಿರಿ ನನ್ನ ಬದುಕಿನಾ ಕಥೆಯಾ
ತಾಳಲಾರಿರಿ ನನ್ನ ಕಣ್ಣೀರ ವ್ಯಥೆಯಾ
ತುಂಬಿಹುದು ಬರೀ ಕಹೀ ನೆನಪುಗಳ ಬುತ್ತಿ
ಕೆಣಕದಿರಿ, ಕೆದಕದಿರಿ ಅವುಗಳ ಚುಚ್ಚಿ॥

ನನ್ನ ಗೋಳಕೇಳಿ ನೀವೇನ ಮಾಡುವಿರಿ
ಮನರಂಜನೆಗಾಗಿ ಸುಮ್ಮನೆ ಕೇಳುವಿರಿ
ನನ್ನ ನೋವ ಹೆಚ್ಚಿಸುವಿರಿ
ಬೇಡುವೆ ದಯಮಾಡಿ ಸುಮ್ಮನಿರಿ॥

ನಡೆದಿಲ್ಲವೇ ಕಹಿಘಟನೆಗಳು ನಿಮ್ಮ ಜೀವನದಲ್ಲಿ
ಇಣುಕಿನೋಡಿದರೇ ಇತರರು ಅದರಲ್ಲಿ
ನಿಮಗೇನನ್ನಿಸಿತು ಆ ಕ್ಷಣದಲ್ಲಿ
ಕನಿಕರಿಸಿ ದಾರಿತೋರಿ ನನ್ನ ಈ ಸಂಕಷ್ಟದಲ್ಲಿ ॥

## 98. ಕವನ ಹೇಗಿರಬೇಕು?

ಹಾಗಿರಬೇಕು, ಕವನ
ಹೀಗಿರಬೇಕು, ಕವನ
ಎನ್ನುವ ಕಿತ್ತಾಟದಲ್ಲಿಯೇ
ಸತ್ತುಹೋಗಿತ್ತು ಕವಿಯಮನ॥

## 99. ಮತ್ತೆ ಬಂತು ಯುಗಾದಿ

ಬಾಳಿನಲಿ ಇರಬೇಕು ಸಿಹಿಕಹಿ ಎಲ್ಲ,
ಅದಕಾಗಿ ಜಗಿಯಬೇಕು ಬೇವುಬೆಲ್ಲ।
ಮರೆಯಬೇಕು ಪರರೊಡನೆ ಶತ್ರುತ್ವವನ್ನ,
ಮೆರೆಯಬೇಕು ಎಲ್ಲರೊಡನೆ ಭ್ರಾತೃತ್ವವನ್ನು ॥

ಒಟ್ಟಿಗೇ ಕೊಟ್ಟರೂ ಬೇವು ಬೆಲ್ಲವನ್ನ,
ಬಿಸಾಡಲಿಚ್ಚಿಸುವರು ಮಂದಿ ಬೇವನ್ನ, ।
ರುಬ್ಬಿ ಬೆಲ್ಲಕೆ ಬೇವನ್ನ,
ಬೇರ್ಪಡಿಸಲಾಗದಂತೆ ಕಹಿಯನ್ನ ॥

ಜೀವನವೆಂದರೆ ಬರಿ ಸಿಹಿಯಲ್ಲ,
ಉಂಟು ಅನಿವಾರ್ಯ ಕಹಿ ಅದರಲ್ಲಿ ।
ಅದಕಾಗಿಯೇ ಅಲ್ಲವೇ, ನೀಡುವುದು ಚೂರ್ಣ,
ಬೇವು ಬೆಲ್ಲವ ರುಬ್ಬಿ ಮಾಡಿದ ಚೂರ್ಣ ॥

## 100. ಬಾಕಿಯಿದೆ ಸ್ವೀಕೃತಿ:

ಕೊನೆಗೂ ಆದೆ ನಾನೂ ಸಾಹಿತಿ,
ಗಿಟ್ಟಿಸಿದೆ ಅರ್ಹತೆ ಕಸಾಪ ಸದಸ್ಯತ್ವಕ್ಕೆ
ಪ್ರಕಟಗೊಂಡಿದೆ ನನ್ನದೂ ಕೆಲವು ಪುಸ್ತಕಗಳು
ಬಾಕಿಯಿದೆಯಷ್ಟೇ ಸಹೃದಯರ ಸ್ವೀಕೃತಿ ॥